# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ಮಾರ್ಚ್ 1, 2025

ಸಂಪುಟ : 51 ಸಂಚಿಕೆ : 288 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




# ಬಿಜೆಪಿಯಲ್ಲಿ ಏಕೈಕ ಸಮುದಾಯಕ್ಕೆ ಮನ್ನಣೆ, ಇತರೆ ವರ್ಗ ನಿರ್ಲಕ್ಷ್ಯ



**ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಅತಿಥ್ ಅಂಬರ್‌ಕರ್ ವ್ಯಾಕುಲತೆ**

ದಾವಣಗೆರೆ, ಫೆ. 28- ಸದಾ ರಾಷ್ಟ್ರೀಯವಾದದ ಬಗ್ಗೆ ಮಾತನಾಡುವ ಬಿಜೆಪಿ ಕೇವಲ ಏಕೈಕ ಸಮುದಾಯದ ಸಮಾವೇಶ, ಪ್ರಮುಖರ ಸಭೆಗಳನ್ನು ಮಾಡುತ್ತಿದ್ದು, ಪಕ್ಷದಲ್ಲಿ ಕೇವಲ ಏಕೈಕ ಸಮುದಾಯಕ್ಕೆ ಮನ್ನಣೆ ನೀಡಲಾಗುತ್ತಿದೆ. ಪಕ್ಷಕ್ಕಾಗಿ ದುಡಿದ ಇತರೆ ಸಮುದಾಯಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಇದರಿಂದಾಗಿ ಆಯಾ ಸಮುದಾಯಗಳ ಮುಖಂಡರು, ಕಾರ್ಯಕರ್ತರು ಪಕ್ಷದಿಂದ ದೂರ ಉಳಿಯುವ ಮಾತುಗಳನ್ನು ಆಡುತ್ತಿದ್ದಾರೆ ಎಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಅತಿಥ್ ಅಂಬರ್‌ಕರ್ ವ್ಯಾಕುಲತೆ ವ್ಯಕ್ತ ಪಡಿಸಿದ್ದಾರೆ.

ದುರಾದೃಷ್ಟ ಎಂದರೆ ಅಧಿಕಾರ ಅನುಭವಿಸಿದ ಸಮುದಾಯಗಳೇ ಮತ್ತೆ ಅಧಿಕಾರಕ್ಕಾಗಿ ಸಭೆ, ಸಮಾರಂಭಗಳನ್ನು ನಡೆಸುತ್ತಿವೆ. ರಾಜ್ಯ ನಾಯಕರು ಸ್ಥಳೀಯ ಜಿಲ್ಲಾ ನಾಯಕರು ಕೂಡ ಕೆಲವೊಬ್ಬರ ಕೈಗೊಂಬೆಗಳಂತೆ ವರ್ತಿಸುತ್ತಿದ್ದಾರೆ. ಇದು ಜಿಲ್ಲೆಯ ಬಿಜೆಪಿ ನಾಯಕರಿಗೆ, ಕಾರ್ಯಕರ್ತರಿಗೆ ಬೇಸರ ಮೂಡಿಸಿದೆ ಎಂದು ತಮ್ಮ ಇಂಗಿತ ವ್ಯಕ್ತ ಪಡಿಸಿದ್ದಾರೆ.

ಬಿಜೆಪಿಯಲ್ಲಿ ಇದೇ ರೀತಿ ಪರಿಸ್ಥಿತಿ ಮುಂದುವರೆದರೆ ಹಿಂದುಳಿದ ವರ್ಗಕ್ಕೆ ಮುಂಬರುವ ಚುನಾವಣೆಗಳಲ್ಲಿ ಇದೆಲ್ಲಕ್ಕೂ ಉತ್ತರ ನೀಡುವ ಪರಿಸ್ಥಿತಿಯನ್ನು ಬಿಜೆಪಿ ನಾಯಕರು ಎದುರಿಸಬೇಕಾಗುತ್ತದೆ. ಇದು ಬಿಜೆಪಿಯ ಕಟ್ಟಕಡೆಯ ಕಾರ್ಯಕರ್ತನ ಅಭಿಪ್ರಾಯ. ಬಿಜೆಪಿಗೆ ಒಂದೇ ಸಮಾಜದ ಮುಖಂಡರು, ಕಾರ್ಯಕರ್ತರು ಮಾತ್ರ ಕೆಲಸ ಮಾಡುತ್ತಿದ್ದಾರೆಯೇ, ಹಿಂದುಳಿದ ವರ್ಗ, ದಲಿತ ಮತ್ತು ಅಲ್ಪ ಸಂಖ್ಯಾತ ವರ್ಗಗಳ ಜನರು, ಮುಖಂಡರು ಬಿಜೆಪಿ ನಾಯಕರ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಸಾರ್ವಜನಿಕರೂ ಕೂಡ ಗೊಣಗುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಕಳೆದ ವಿಧಾನಸಭೆಯಲ್ಲೂ ಕೂಡ ಯಾವುದೇ ಓಬಿಸಿ ನಾಯಕರನ್ನು ಗಣನೆಗೆ ತೆಗೆದುಕೊಂಡಿಲ್ಲ. ಪಕ್ಷದ ಅಭಿವೃದ್ದಿಗಾಗಿ ಎಲ್ಲಾ ಸಮುದಾಯಗಳ ಮುಖಂಡರು ಅಗತ್ಯ. ಕಾರಣ ಇನ್ನಾದರೂ ರಾಜ್ಯ ಮುಖಂಡರು ಎಲ್ಲಾ ಸಮುದಾಯಗಳ ಮುಖಂಡರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ ಪಕ್ಷವು ಉನ್ನತ ಮಟ್ಟಕ್ಕೆ ಬೆಳೆಯಲಿದೆ. ಅಲ್ಲದೇ ಜನರೂ ಕೂಡ ಪಕ್ಷಕ್ಕೆ ಮಾನ್ಯತೆ ನೀಡುತ್ತಾರೆ ಎಂದು ಹೇಳಿದ್ದಾರೆ.

## ಉಕ್ಕಡಗಾತ್ರಿ : ಜಾತ್ರೆಗೆ ಚಾಲನೆ



(5ನೇ ಪುಟದಿಂದ) ಬಸವನಗೌಡ ಪಾಳೇದ, ವೀರನಗೌಡ ಹಲಗಪ್ಪನವರ ಮತ್ತು ವಿದ್ಯಾಸಂಸ್ಥೆಯ ಪದಾಧಿಕಾರಿಗಳಾದ ಜಿಗಳೇರ ಗದಿಗೇಶ್, ವೀರಭದ್ರಪ್ಪ ಕೋಟೇರ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ನಾಳೆ ಶನಿವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಕರಿಬಸವೇಶ್ವರ ಸ್ವಾಮಿಗೆ ಅಭಿಷೇಕ ಮತ್ತು ಮಹಾಪೂಜೆ ನಡೆದ ನಂತರ ನಂದಿಗುಡಿ ಮಠದ ಸಿದ್ದರಾಮೇಶ್ವರ ಶಿವಾಚಾರ್ಯ ಶ್ರೀಗಳು ಮಹಾ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

## ವರ್ಷಾಂತದ ಒಳಗೆ ವ್ಯಾಪಾರಿ ಒಪ್ಪಂದ

(5ನೇ ಪುಟದಿಂದ) 2013ರಲ್ಲಿ ಒಪ್ಪಂದ ಕುರಿತ ಮಾತುಕತೆಯನ್ನು ಸ್ಥಗಿತಗೊಳಿಸಲಾಗಿತ್ತು. ಜೂನ್ 2022 ರಲ್ಲಿ ಒಪ್ಪಂದದ ಮಾತುಕತೆ ಪುನರಾರಂಭಿಸಲಾಗಿತ್ತು

ಭಾರತ ಹಾಗೂ ಯುರೋಪ್ ಒಕ್ಕೂಟಗಳ ಸಹಭಾಗಿತ್ವದ ಬಗ್ಗೆ ದಿಟ್ಟ ಹಾಗೂ ಮಹತ್ವಾಕಾಂಕ್ಷಿ ಮಾರ್ಗಸೂಚಿ ರೂಪಿಸಿದ್ದೇವೆ. ಮುಂದಿನ ಭಾರತ ಹಾಗೂ ಯುರೋಪ್ ಒಕ್ಕೂಟ ಶೃಂಗ ಭೇಟಿಯ ವೇಳೆ ಸಹಭಾಗಿತ್ವ ಆರಂಭವಾಗಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ವರ್ಷ ಭಾರತವು ಶೃಂಗ ಭೇಟಿಯನ್ನು ಆಯೋಜಿಸಲಿದೆ. ಯುರೋಪಿನ ಕಾರು, ವೈನ್ ಹಾಗೂ ಕೃಷಿ ಉತ್ಪನ್ನಗಳ ಮೇಲೆ ಭಾರತ ಹೇರಿರುವ ತೆರಿಗೆ ಕಡಿತಗೊಳಿಸಬೇಕು ಎಂಬುದು ಯುರೋಪ್ ಒಕ್ಕೂಟದ ಪ್ರಬಲ ಪಟ್ಟಾಗಿತ್ತು. ಹೀಗಾಗಿ ಮಾತುಕತೆಗಳು ಮುಂದುವರೆದಿರಲಿಲ್ಲ.

## ಕಾಲೇಜಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಕೆ

(5ನೇ ಪುಟದಿಂದ) ವಿಭಾಗಗಳಲ್ಲಿ ಪರಿಣಿತರಾಗಬಹುದು ಎಂದು ಹೇಳಿದರು.

ಬಹಳ ಜನರಿಗೆ ಶಿಲ್ಪಕಲಾ ಅಕಾಡೆಮಿ ಇರುವುದೇ ಗೊತ್ತಿಲ್ಲ. ಬೆಂಗಳೂರಿನಲ್ಲಿ ಅಕಾಡೆಮಿಯ ಕಚೇರಿ ಇದೆ. ದೆಹಲಿ ಹೊರತುಪಡಿಸಿದರೆ ಕರ್ನಾಟಕದಲ್ಲಿ ಮಾತ್ರ ಶಿಲ್ಪ ಕಲಾ ಅಕಾಡೆಮಿ ಇರುವುದು ವಿಶೇಷ. ರಾಜ್ಯದ ಮೂಲೆ ಮೂಲೆಯಲ್ಲಿರುವ ಶಿಲ್ಪ ಕಲಾವಿದರನ್ನು ಗುರುತಿಸಿ, ಅವರಿಗೆ ಅವಕಾಶ ಕಲ್ಪಿಸುವ ಕೆಲಸವನ್ನು ಅಕಾಡೆಮಿ ಮಾಡುತ್ತಿದೆ ಎಂದು ಹೇಳಿದರು.

ಶಿಲ್ಪಕಲೆಗೆ ಸಂಬಂಧಿಸಿದಂತೆ ಪ್ರತಿ ವರ್ಷ ಪುಸ್ತಕಗಳನ್ನು ಹೊರ ತರುವ ಕೆಲಸವನ್ನೂ ಮಾಡಲಾಗುತ್ತಿದೆ. ಶಿಲ್ಪಗಳನ್ನು ಸಂಗ್ರಹಿಸುವ ಕಾರ್ಯಕ್ಕೂ ಅಕಾಡೆಮಿ ಒತ್ತು ನೀಡುತ್ತದೆ. 50ಕ್ಕೂ ಹೆಚ್ಚು ಶಿಲ್ಪಗಳನ್ನು ಸಂಗ್ರಹಿಸಿ ಶಿಬಿರಗಳಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದರು.

ಮುಂದಿನ ದಿನಗಳಲ್ಲಿ ದಾವಣಗೆರೆ ಕಲಾ ಕಾಲೇಜಿನಲ್ಲಿ ಕಲಾವಿದರ ಶಿಬಿರ ನಡೆಸಲಾಗುವುದು. ಕಾಲೇಜಿಗೆ ಬೇಕಾದ ಎಲ್ಲಾ ಸಹಕಾರ ನೀಡಲು ತಾವು ಸಿದ್ಧರಿರುವುದಾಗಿ ಹೇಳಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಗೀತಾ ಎಸ್. ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡುತ್ತಾ, ಚಿತ್ರಗಳನ್ನು ಬಿಡಿಸುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ಹೇಳಿದರು. ಚಿತ್ರ ಕಲೆ ರೂಢಿಸಿಕೊಂಡವರಿಗೆ ಉತ್ತಮ ಆಲೋಚನಾ ಶಕ್ತಿ ಇರುತ್ತದೆ. ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಬಿಡಿಸುವ ಚಿತ್ರಗಳಿಗೂ ಅಂಕಗಳಿರುತ್ತವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಚಿತ್ರಕಲೆಯತ್ತ ಆಸಕ್ತಿ ಬೆಳೆಸಿಕೊಳ್ಳಿ ಎಂದು ಹೇಳಿದರು.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಚಿತ್ರಕಲಾವಿದ ಶ್ರೀನಾಥ್ ಬಿದರೆ, ದೃಶ್ಯಕಲಾ ವಿವಿ ಪ್ರಾಚಾರ್ಯ ಡಾ. ಜೈರಾಜ್ ಚಿಕ್ಕಪಾಟೀಲ್, ಸಹಾಯಕ ಪ್ರಾಧ್ಯಾಪಕ ಡಾ.ಸತೀಶ್ ಕುಮಾರ್ ಪಿ.ವಲ್ಲೇಪುರೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯ ಕುಮಾರ್ ವೈ. ಉಪಸ್ಥಿತರಿದ್ದರು.

## 4 ರಂದು ಕೈದಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ, ಫೆ.28- ತಾಲ್ಲೂಕಿನ ಕೈದಾಳೆ ಗ್ರಾಮದ ಕೈದಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮಹಾ ರಥೋತ್ಸವವು ಮಾರ್ಚ್ 4 ರಂದು ನೆರವೇರಲಿದೆ.

ಮಾ.2 ರಂದು ಸಂಜೆ 6-30 ರಿಂದ ಗೋಧೂಳಿ ಉತ್ಸವದೊಂದಿಗೆ ಬನ್ನಿ ಮಂಟಪ ಪೂಜೆ ನೆರವೇರಲಿದ್ದು, ಮಾ.3 ರಂದು ಬೆಳಿಗ್ಗೆ 7-30 ರಿಂದ ಗಜ ಉತ್ಸವದೊಂದಿಗೆ ಬನ್ನಿ ಮಂಟಪ ಪೂಜೆ ನಡೆಯಲಿದೆ. ರಾತ್ರಿ 10-30ಕ್ಕೆ ರಥದ ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮವಿದ್ದು, ರಾತ್ರಿ 11 ಗಂಟೆಗೆ ಶ್ರೀ ಸ್ವಾಮಿಯ ರಥಕ್ಕೆ ಅರಿಶಿಣ ಎಣ್ಣೆ ಧಾರಣೆ ಮಾಡಲಾಗುವುದು.

## ಜಗಳೂರು ತಾಲ್ಲೂಕಿನ ಹಿರಿಯ ನೇತ್ರಾಧಿಕಾರಿ ಪರಮೇಶ್ವರಪ್ಪ ನಿವೃತ್ತಿ



ಜಗಳೂರು, ಫೆ.28- ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಹಿರಿಯ ನೇತ್ರಾಧಿಕಾರಿ ಕೆ.ಎಂ. ಪರಮೇಶ್ವರಪ್ಪ ಸುದೀರ್ಘ 39 ವರ್ಷಗಳ ಸರ್ಕಾರಿ ಸೇವೆಯಿಂದ ಇಂದು ಸೇವಾ ನಿವೃತ್ತಿ ಹೊಂದಿದ್ದಾರೆ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸತತವಾಗಿ 35 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿರುವ ಅವರು, ತಾಲ್ಲೂಕು ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜಿಲ್ಲಾ ನೇತ್ರಾಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಮತ್ತು ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ ಹಾಗೂ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಅಡಿಯಲ್ಲಿ ಇವರ ಅತ್ಯುತ್ತಮ ಸೇವೆಗಾಗಿ ಸರ್ಕಾರ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿದೆ.

## ನಗರದಲ್ಲಿ ಇಂದು ಬಿಜೆಪಿ ವೀರಶೈವ ಲಿಂಗಾಯತ ಮುಖಂಡರ ಸಭೆ

ಕರ್ನಾಟಕದಲ್ಲಿ ಬಿಜೆಪಿಯನ್ನು ಸದೃಢವಾಗಿ ಬೆಳೆಸುವ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಸಮೃದ್ಧಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಿತ್ರದುರ್ಗ, ಹಾವೇರಿ, ದಾವಣಗೆರೆ ಜಿಲ್ಲೆಗಳ ವೀರಶೈವ ಲಿಂಗಾಯತ ಸಮಾಜದ ಪ್ರಮುಖರ ಸಭೆ ನಡೆಸಲಾಗುವುದು ಎಂದು ವೀರಶೈವ ಲಿಂಗಾಯತ ಸಮಾಜದ ಮುಖಂಡ ಲೋಕಿಕೆರೆ ನಾಗರಾಜ್ ತಿಳಿಸಿದ್ದಾರೆ.

ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳ ಪಂಗಡಗಳ ಪ್ರಮುಖರ ಸಭೆ ನಡೆಯಲಿದ್ದು, ಸಭೆಯನ್ನು ನಡೆಸುವ ಸ್ಥಳದ ಬಗ್ಗೆ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು. ಸಭೆಗೆ ಮೂರು ಜಿಲ್ಲೆಗಳ ವೀರಶೈವ ಲಿಂಗಾಯತ ಸಮಾಜದ ಮುಖಂಡರು, ಮಾಜಿ ಹಾಗೂ ಹಾಲಿ ಶಾಸಕರು, ಸಂಸದರು ಆಗಮಿಸಲಿದ್ದಾರೆ.

## ಹಂಪೆ ಉತ್ಸವ ಕವಿಗೋಷ್ಠಿಗೆ ನಾಗರಾಜ



ದಾವಣಗೆರೆ ಫೆ. 28 - ವಿಶ್ವವಿಖ್ಯಾತ ಹಂಪೆ ಉತ್ಸವದ ಅಂಗವಾಗಿ ವಿರೂಪಾಕ್ಷ ದೇವಾಲಯದ ಆವರಣದ ವೇದಿಕೆಯಲ್ಲಿ ಮಾರ್ಚ್ 1ರ ಬೆಳಿಗ್ಗೆ ಏರ್ಪಡಿಸಿರುವ ಕವಿಗೋಷ್ಠಿಯಲ್ಲಿ ಕನ್ನಡ ಅಧ್ಯಾಪಕ ನಾಗರಾಜ ಸಿರಿಗೆರೆ ಅವರು ಕವನ ವಾಚನ ಮಾಡಲಿದ್ದಾರೆ.

## ಡಿಸೆಂಬರ್ : ಶೇ. 6.2ರ ಬೆಳವಣಿಗೆ

(5ನೇ ಪುಟದಿಂದ) 2024 - 25ರ ಇಡೀ ವರ್ಷದಲ್ಲಿ ಶೇ.6.5ರ ಬೆಳವಣಿಗೆಯಾಗುವ ನಿರೀಕ್ಷೆ ಇದೆ.

ಸರ್ಕಾರದ ಬಂಡವಾಳ ವೆಚ್ಚ ಹಾಗೂ ಮಹಾಕುಂಭಮೇಳದ ಸಂದರ್ಭದಲ್ಲಿ ಆಗಿರುವ ಹೆಚ್ಚುವರಿ ವೆಚ್ಚಗಳ ಕಾರಣದಿಂದಾಗಿ ನಾಲ್ಕನೇ ಚತುರ್ಥದಲ್ಲಿ ಜಿಡಿಪಿ ಬೆಳವಣಿಗೆ ದರ ಶೇಕಡ 7.6 ಕ್ಕೆ ತಲುಪಲಿದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

## ಪ್ರಥಮ ಪುಣ್ಯಸ್ಮರಣೆ



ದಿ|| ಶ್ರೀಮತಿ ಸುನಂದಮ್ಮ ಮತ್ತು ದಿ|| ಜಾಜೂರು ಓಂಕಾರಪ್ಪ ದಂಪತಿ ಪುತ್ರರಾದ

**ಡಾ|| ಮಂಜುನಾಥ ಜಾಜೂರು**

ಜನನ : 16.07.1952 - ಮರಣ 01.03.2024

(ನಿವೃತ್ತ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರಿವಳಿಕೆ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜು, ದಾವಣಗೆರೆ.)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.

ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಗೀತಾ ಎಂ. ಜಾಜೂರ್ ಮತ್ತು ಮಕ್ಕಳು ಮೊಮ್ಮಕ್ಕಳು, ಅಳಿಯಂದಿರು, ದಾವಣಗೆರೆ.

ಸಹೋದರಿ : ಶ್ರೀಮತಿ ಪುಷ್ಪಾ ಮತ್ತು ಶ್ರೀ ಹೆಚ್.ಸಿ. ಶ್ರೀಕಂಠ ಮಗಳು, ಅಳಿಯ, ಮೊಮ್ಮಕ್ಕಳು, ದಾವಣಗೆರೆ.

ಸಹೋದರರು : ಶ್ರೀಮತಿ ಸುಧಾ ಮತ್ತು ಡಾ|| ನಾಗರಾಜ್ ಜಾಜೂರ್ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಅಮೇರಿಕಾ (USA)

ಶ್ರೀಮತಿ ಸುಕನ್ಯಾ ಮತ್ತು ಶ್ರೀ ರವೀಂದ್ರನಾಥ್ ಜಾಜೂರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ದಾವಣಗೆರೆ.

ಬೂದಿಹಾಳ್ ಗೌಡರ ವಂಶಸ್ಥರು, ಜಾಜೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

## ನಂದಿತಾವರೆಯಲ್ಲಿ ನಾಳೆ ಶ್ರೀ ಬಸವೇಶ್ವರ ರಥೋತ್ಸವ



ಮಲೇಬೆನ್ನೂರು ಸಮೀಪದ ನಂದಿತಾವರೆ ಗ್ರಾಮದ ಆರಾಧ್ಯ ದೈವ ಶ್ರೀ ಬಸವೇಶ್ವರ ದೇವರ ರಥೋತ್ಸವವು ನಾಳೆ ಭಾನುವಾರ ಜರುಗಲಿದೆ.

ಇಂದು ಬೆಳಿಗ್ಗೆ 5 ರಿಂದ 7ರವರೆಗೆ ದೇವರಿಗೆ ರುದ್ರಾಭೀಷೇಕ, ಪೂಜೆ ಬಳಿಕ ಬೆಳಿಗ್ಗೆ 8.30ಕ್ಕೆ ಕುದುರೆ ಉಚ್ಛಾಯ ನಡೆಯಲಿದೆ. ರಾತ್ರಿ 9.30ಕ್ಕೆ ಮುತ್ತೈದೆಯರಿಂದ ಎಣ್ಣೆ, ಅರಿಶಿಣ ಹಾಗೂ ಮಹಾಮಂಗಳಾರತಿಯೊಂದಿಗೆ ಮಹಾರಥಕ್ಕೆ ಕಳಾಸಧಾರಣೆ ಮಾಡಲಾಗುವುದು.

ನಾಳೆ ಭಾನುವಾರ ಬೆಳಿಗ್ಗೆ 5 ರಿಂದ 7ರವರೆಗೆ ವಾಸನದ ಜಿ. ನಂದಿಗೌಡರ ಕುಟುಂಬದಿಂದ ದೇವರಿಗೆ ರುದ್ರಾಭಿಷೇಕ, ಬೆಳಿಗ್ಗೆ 9.30ರಿಂದ ಸುರಿಗಿ ನೀರು ನಂತರ ಜಿಗಳಿಯ ಗೌಡ್ರ ವಂಶಸ್ಥರಿಂದ ದೇವರಿಗೆ ಬಾಸಿಂಗ ಧಾರಣೆ ಮಾಡಲಾಗುವುದು. ಬೆಳಿಗ್ಗೆ 10.30ರಿಂದ ಕಿವಿ ಚುಚ್ಚುವುದು. ಶಾಸ್ತ್ರ, ಹರಕೆ ಒಪ್ಪಿಸುವ ಕಾರ್ಯಕ್ರಮಗಳು ನಡೆಯಲಿದ್ದು, ರಾತ್ರಿ 10.30ಕ್ಕೆ ಎಕ್ಕೆಗೊಂದಿ ಗ್ರಾಮದ ಬಸವೇಶ್ವರ ದೇವರನ್ನು ಮೆರವಣಿಗೆ ಮೂಲಕ ಸ್ವಾಗತಿಸಲಾಗುವುದು. ಇದೇ ದಿನ ತಡರಾತ್ರಿ 12.30ಕ್ಕೆ ಶ್ರೀ ಬಸವೇಶ್ವರ ದೇವರ ಮಹಾರಥೋತ್ಸವವು ಸಕಲ ವಾದ್ಯಗಳೊಂದಿಗೆ ಜರುಗಲಿದೆ.

## ಹಿಮಪಾತ : ಹಿಮದಡಿ ಸಿಲುಕಿದ್ದ 32 ಕಾರ್ಮಿಕರ ರಕ್ಷಣೆ

**ಇನ್ನೂ 25 ಜನರ ರಕ್ಷಣೆಗೆ ಕಾರ್ಯಾಚರಣೆ**

ಡೆಹರಾಡೂನ್, ಫೆ. 28 - ಉತ್ತರಾಖಂಡದ ಚಮೋಲಿ ಜಿಲ್ಲೆಯ ಮನ ಎಂಬ ಹಳ್ಳಿಯಲ್ಲಿ ಹಿಮಪಾತ ಸಂಭವಿಸಿ ಬಿ.ಆರ್.ಓ.ದ 57 ಕಾರ್ಮಿಕರು ಸಿಲುಕಿದ್ದಾರೆ. ಇವರ ಪೈಕಿ 32 ಕಾರ್ಮಿಕರನ್ನು ರಕ್ಷಿಸಲಾಗಿದೆ.

ಮನ ಹಾಗೂ ಬದರಿನಾಥಗಳ ನಡುವೆ ಹಿಮಕುಸಿತ ಸಂಭವಿಸಿ ಗಡಿ ರಸ್ತೆ ಸಂಘಟನೆ (ಬಿ.ಆರ್.ಓ.) ಕಾರ್ಮಿಕರು ಸಿಲುಕಿದ್ದಾರೆ.

ಕಠಿಣ ಮಾರ್ಗ, ಭಾರೀ ಹಿಮ ಹಾಗೂ ಚಳಿಯ ನಡುವೆ ರಕ್ಷಣಾ ಕಾರ್ಯಾಚರಣೆಗಾಗಿ ಹಲವು ತಂಡಗಳು ಶ್ರಮಿಸಿವೆ. 32 ಕಾರ್ಮಿ ಕರನ್ನು ರಕ್ಷಿಸಲಾಗಿದೆ.

ಇವರ ಪೈಕಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ. ಮನ ಹಳ್ಳಿಯು ಬದರಿನಾಥದಿಂದ 3 ಕಿ.ಮೀ. ದೂರದಲ್ಲಿದೆ. ಇದು ಭಾರತ - ಟಿಬೆಟ್ ಗಡಿಯ ಕೊನೆಯ ಗ್ರಾಮವಾಗಿದೆ.

ಕೆಟ್ಟ ಹವಾಮಾನ ಹಾಗೂ ಇನ್ನಷ್ಟು ಹಿಮ ಕುಸಿತ ಉಂಟಾಗುವ ಸಾಧ್ಯತೆ ಇರುವುದರಿಂದ ರಾತ್ರಿ ರಕ್ಷಣಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಬೆಳಗ್ಗೆ 7.15ರ ಸಮಯದಲ್ಲಿ ಹಿಮಪಾತ ಸಂಭವಿಸಿದೆ. ಇದರಿಂದಾಗಿ ಕಾರ್ಮಿಕರು ಎಂಟು ಕಂಟೇನರ್ ಹಾಗೂ ಒಂದು ಶೆಡ್ ಒಳಗೆ ಸಿಲುಕಿದ್ದರು. ಒಂದು ಬೃಹತ್ ಹಿಮಪಾತ ಸಂಭವಿಸಿದ ನಂತರ ಎರಡು ಸಣ್ಣ ಹಿಮಪಾತಗಳು ಉಂಟಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವಿವಿ ನಾಮನಿರ್ದೇಶಿತ ಸದಸ್ಯತ್ವ ಕೊಡಿಸುವುದಾಗಿ ಹೇಳಿ ವಂಚನೆ

(5ನೇ ಪುಟದಿಂದ) ಮಾರ್ಗದರ್ಶನದಲ್ಲಿ ಪ್ರಭಾರ ಪೊಲೀಸ್ ನ್‌ಸ್ಪೆಕ್ಟರ್ ಶಿಲ್ಪ ವೈ, ಸುನೀಲ್ ತೇಲಿ, ರೂಪ ತೆಂಬದ್, ಸಿಬ್ಬಂದಿಗಳಾದ ಅಶೋಕ, ಗೋವಿಂದರಾಜ್, ಸೋಮಶೇಖರ್, ಲೋಹಿತ್, ಯೋಗೀಶ್ ನಾಯ್ಕ ರವರನ್ನೊಳಗೊಂಡ ತಂಡ ರಚಿಸಲಾಗಿತ್ತು.

ಈ ತಂಡವು ಆರೋಪಿ ಹಲ್ಲೇಹಾಲ್ ಗ್ರಾಮದ ಕೃಷಿ ಕೆಲಸ ಮಾಡಿಕೊಂಡಿದ್ದ ಹೆಚ್.ಟಿ ಸದ್ರುಲ್ಲಾ ಖಾನ್ ಬಂಧಿಸಿ, 40,000 ರೂಪಾಯಿ ಮೌಲ್ಯದ ಕೃತ್ಯಕ್ಕೆ ಬಳಸಿದ್ದ 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದೆ.

ಆರೋಪಿಯು ಈ ಹಿಂದೆ ಇದೇ ರೀತಿ ಯೂನಿರ್ವಸಿಟಿಗಳಲ್ಲಿ ರಾಜ್ಯಪಾಲರ ನಾಮನಿರ್ದೇಶನ್ಯದ ಸದಸ್ಯತ್ವ ಕೊಡಿಸುವುದಾಗಿ ಮತ್ತು ಸರ್ಕಾರಿ ಕೆಲಸ ಕೊಡಿಸುವುದಾಗಿ ಸರ್ವಜನಿಕರಿಗೆ ವಂಚನೆ ಮಾಡಿದ್ದು ತಿಳಿದು ಬಂದಿದೆ.

ಬೆಂಗಳೂರು ನಗರದ ವಿಧಾನಸೌಧ, ಗೋವಿಂದರಾಜನಗರ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆಯ ಹೆಬ್ಬಗೋಡಿ ಪೊಲೀಸ್ ಠಾಣೆ, ಚಿತ್ರದುರ್ಗ ಜಿಲ್ಲೆಯ ಕೋಟೆ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ, ಗೌಣಿಪಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಭಾವನೆಗಳು ಕಲಾಕೃತಿಗಳಾದಾಗ...

(5ನೇ ಪುಟದಿಂದ) ರೂಪ ಕೊಟ್ಟಿದ್ದರು. ಪ್ರತಿಯೊಂದು ಚಿತ್ರಗಳು ವಿಭಿನ್ನ ಪರಿಕಲ್ಪನೆಯಲ್ಲಿ ಮೂಡಿ ಬಂದಿದ್ದವು.

ಟಿವಿಯಲ್ಲಿ ಬರುತ್ತಿದ್ದ ಕಾರ್ಟೂನ್‌ಗಳು, ನಿಸರ್ಗ, ಗ್ರಾಮೀಣ ಸೊಬಗು, ವಿಜ್ಞಾನ, ಐತಿಹಾಸಿಕ ಕ್ಷೇತ್ರಗಳು, ಸ್ವಾತಂತ್ರ್ಯ ಹೋರಾಟಗಾರರು, ದೇವರ ಹಾಗೂ ಶರಣರ ಚಿತ್ರಗಳು, ಹೀಗೆ ಹಲವಾರು ಚಿತ್ರಗಳು ಗಮನ ಸೆಳೆದವು.

ಹೃದಯದ ಚಿತ್ರದೊಳಗೆ ತಂದೆ-ಮಗಳು, ಅಯೋಧ್ಯೆ ಕಡೆ ಹೆಜ್ಜೆ ಹಾಕುತ್ತಿರುವ ಶ್ರೀರಾಮ ಹಾಗೂ ಸೀತೆ, ಮಾಲಿನ್ಯ ತಡೆಗಟ್ಟಿ ಭೂಮಿಯನ್ನು ಕಾಪಾಡಿ ಎಂಬ ಸಂದೇಶದ ಚಿತ್ರ, ರಾಧೆಯೊಂದಿಗೆ ಕೊಳಲನೂದುವ ಕೃಷ್ಣ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಿರಿ ಎನ್ನುವ ಚಿತ್ರ, ಮೋಟು-ಪತ್ಲು ಕಾರ್ಟೂನ್ ಸೇರಿದಂತೆ ಹಲವು ಚಿತ್ರಗಳು ಆಕರ್ಷಕವಾಗಿದ್ದವು.

ದಾವಣಗೆರೆ ಪಬ್ಲಿಕ್ ಸ್ಕೂಲ್, ಲಯನ್ಸ್ ಸ್ಕೂಲ್, ಕನಕ ಸೆಂಟ್ರಲ್ ಸ್ಕೂಲ್, ಸೇಂಟ್ ಫಾಲ್ಸ್ ಕಾನ್ವೆಂಟ್, ಹರಿಹರದ ಗುತ್ತೂರು ಸರ್ಕಾರಿ ಪ್ರೌಢಶಾಲೆ ಹಾಗೂ ಸಂತೇಬೆನ್ನೂರು ಕರ್ನಾಟಕ ಪಬ್ಲಿಕ್ ಶಾಲಾ ಮಕ್ಕಳು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಬಹುತೇಕ ಎಲ್ಲಾ ಮಕ್ಕಳು ಉತ್ತಮ ಕಲಾಕೃತಿಗಳನ್ನು ರಚಿಸಿದ್ದು, ಬಹುಮಾನ ನೀಡಲು ಉತ್ತಮ ಕಲಾಕೃತಿ ಆಯ್ಕೆಯೇ ಸವಾಲಿನದಾಗಿತ್ತು. ಆದಾಗ್ಯೂ ವಿವಿಧ ವಿಭಾಗಗಳಲ್ಲಿ ಕಲಾಕೃತಿ ಆಯ್ಕೆ ಮಾಡಿ ಪ್ರತಿ ಶಾಲೆಗೆ 9 ಬಹುಮಾನಗಳನ್ನು ನೀಡಲಾಗುತ್ತಿದೆ ಎಂದು ಹಿರಿಯ ಕಲಾವಿದ ಚಂದ್ರಶೇಖರ್ ಎಸ್. ಸಂಗಾ ತಿಳಿಸಿದರು. ಕಲಾವಿದರಾದ ಎಂ.ರಾಮು, ಪ್ರಶಾಂತ್ ಎನ್., ವಿನಯ್ ಸೊನ್ನದ್ 'ಚಿಗುರು ಚಿತ್ತಾರ' ಯಶಸ್ವಿಗೆ ಸಹಕರಿಸಿದರು.

## ಬಿಎಸ್‌ವೈಗೆ ಹೈಕೋರ್ಟ್ ಸಮನ್ಸ್

(5ನೇ ಪುಟದಿಂದ) ತನ್ನ ಮಗಳಿಗೆ ಯಡಿಯೂರಪ್ಪ ಲೈಂಗಿಕ ಕಿರುಕುಳ ನೀಡಿದ್ದರು ಎಂಬುದಾಗಿ ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದರು.

ಹಿರಿಯ ಪೊಲೀಸ್ ಅಧಿಕಾರಿಗಳು, ರಾಜ ಕಾರಣಿಗಳು, ಉದ್ಯಮಿಗಳು ಸೇರಿದಂತೆ ಒಟ್ಟು 53 ಮಂದಿ ವಿರುದ್ಧವೂ ಸಂತ್ರಸ್ತೆ ತಾಯಿ ದೂರು ನೀಡಿದ್ದರು.

ಕಳೆದ ಲೋಕಸಭಾ ಚುನಾವಣೆ ಸಂದರ್ಭ ದಲ್ಲೇ ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಪೋಕ್ಸೋ ಹಾಗೂ 354 (ಎ) ಅಡಿ ಪ್ರಕರಣ ದಾಖಲಿಸಿದ್ದು, ಕೆಲವು ದಿನಗಳವರೆಗೆ ಈ ವಿಷಯ ರಾಜಕೀಯವಾಗಿ ಸದ್ದು ಮಾಡಿತ್ತು.

ಈ ಮಧ್ಯೆ, ಯಡಿಯೂರಪ್ಪ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದ ದೂರುದಾರ ಮಹಿಳೆ 2024ರ ಮೇ ತಿಂಗಳಲ್ಲಿ ಮೃತಪಟ್ಟರು.

ಪ್ರಕರಣದ ವಿಚಾರಣೆಯನ್ನು ಈಗ ಕೈಗೆತ್ತಿ ಕೊಂಡಿರುವ ನ್ಯಾಯಾಲಯ ಯಡಿಯೂರಪ್ಪ ಅವರಿಗೆ ವಿಚಾರಣೆಗೆ ಖುದ್ದು ಹಾಜರಾಗುವಂತೆ ಸೂಚಿಸಿದೆ.

## ವಿಜೃಂಭಣೆಯ ಕುರುವತ್ತಿ ರಥೋತ್ಸವ

(5ನೇ ಪುಟದಿಂದ) ಸಮ್ಮಾಳ ವಾದ್ಯಗಳು ಮೆರಗು ನೀಡಿದ್ದವು. ಜಾತ್ರೆಗೆ ಅಪಾರ ಪ್ರಮಾಣದಲ್ಲಿ ರೈತರು ಹಳಿಬಂಡಿ ಹೂಡಿಕೊಂಡು ವಿವಿಧ ಬಗೆಯಲ್ಲಿ ಎತ್ತುಗಳನ್ನು ಅಲಂಕಾರ ಮಾಡಿಕೊಂಡು ಬಂದದ್ದು ಕಣ್ಮನ ಸೆಳೆಯುವಂತಿತ್ತು.

ಸಂಜೆ 4ಗಂಟೆಯಿಂದ ವಂಶಪಾರಂಪರ್ಯ ಧರ್ಮಾಧಿಕಾರಿಗಳ ಮನೆಯಿಂದ ಸ್ವಾಮಿಯ ಆಭರಣಗಳನ್ನು ಹಾಗೂ ಗ್ರಾಮದ ತೋಂಟದಾರ್ಯ ವಿರಕ್ತ ಮಠದಿಂದ ಎರಡು ಆಶೀರ್ವಾದದ ಕಾಯಿಗಳನ್ನು ದೇವಸ್ಥಾನಕ್ಕೆ ತರಲಾಯಿತು. ನಂತರ ಶ್ರೀ ಸ್ವಾಮಿಯ ಉತ್ಸವ ಮೂರ್ತಿಯನ್ನು ಅಲಂಕರಿಸಿ, ಪಾಲಿಕೆಯಲ್ಲಿ ಕೂಡ್ರಿಸಿ ಮೆರವಣಿಗೆಯ ಮೂಲಕ ಕರೆತಂದು ರಥೋತ್ಸವದಲ್ಲಿ ಕೂಡಿರಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ತೇರು ಸಾಗುತ್ತಿದಂತೆಯೇ ನೆರೆದ ಲಕ್ಷಾಂತರ ಭಕ್ತರು ಹರಹರ ಮಹಾದೇವ ಎನ್ನುತ್ತಾ ಬಾಳೆಹಣ್ಣು ಹಾಗೂ ಉತ್ತತ್ತಿಯನ್ನು ಎಸೆದರು.

ನಾಡಿನ ರೈತಬಾಂಧವರ ಆರಾಧ್ಯ ದೈವ ಬಸವೇಶ್ವರ ಜಾತ್ರೆಗೆ ನಾಡಿನ ನಾನಾ ಭಾಗಗಳಿಂದ ಎತ್ತಿನ ಬಂಡಿ, ಟ್ರ್ಯಾಕ್ಟರ್ ಸೇರಿದಂತೆ ಇತರೆ ವಾಹನಗಳ ಮೂಲಕ ಹಾಗೂ ಪಾದಯಾತ್ರೆಯ ಮೂಲಕ ಲಕ್ಷಾಂತರ ಭಕ್ತಸಾಗರ ಹರಿದು ಬಂದಿತ್ತು. ಪಾದಯಾತ್ರೆಗೆ ಬರುವ ಭಕ್ತಾದಿಗಳಿಗೆ ದಾರಿಯುದ್ದಕ್ಕೂ ಭಕ್ತರು ಊಟ, ಫಲಹಾರ ಹಾಗೂ ತಂಪು ಪಾನೀಯದ ವ್ಯವಸ್ಥೆ ಮಾಡಿ ಧನ್ಯತೆ ಮೆರೆದರು.


## ಲೇಬರ್ ಕಾಲೋನಿಯಲ್ಲಿ ಶಿವರಾತ್ರಿ ಜಾಗರಣೆ

ಲೇಬರ್ ಕಾಲೋನಿ 6ನೇ ತಿರುವಿನಲ್ಲಿರುವ (ಕೆಎಸ್ಸಾರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ) ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಬರುವ ಮಾರ್ಚ್ 4ರ ವರೆಗೆ ದೇವಸ್ಥಾನದಲ್ಲಿ 57ನೇ ವರ್ಷದ ಶಿವರಾತ್ರಿ ಜಾಗರಣೆ ಮಹೋತ್ಸವ ನಡೆಯಲಿದೆ.

ಇಂದು ಬೆಳಗ್ಗೆ 8 ಗಂಟೆಗೆ ಮಹಾಪೂಜೆ ನಂತರ ವಾದ್ಯ ವೈಭವಗಳೊಂದಿಗೆ ಸ್ವಾಮಿಯ ಮೆರವಣಿಗೆ ಹಾಗೂ ಮಧ್ಯಾಹ್ನ ಪ್ರಸಾದ ವಿನಿಯೋಗ ನಡೆಯಲಿದೆ.

ನಾಳೆ ಭಾನುವಾರ 8 ಗಂಟೆಗೆ ಸ್ವಾಮಿಗೆ ಪೂಜೆ ಪಳಾರ ಹಾಕಿಸುವುದು. 4ರಂದು ಸಂಜೆ ಪೂಜೆ ನಡೆಯಲಿದ್ದು, ನಂತರ ಪಳಾರ ವಿತರಣೆ ನಡೆಯಲಿದೆ.

## ಅಕ್ಕಿ ವರ್ತಕ - ಶಿವಗೋಷ್ಠಿ ಅಧ್ಯಕ್ಷ ಮಾಗನೂರು ಸೋಮಶೇಖರ ಗೌಡ್ರು ನಿಧನ



ದಾವಣಗೆರೆ ಫೆ.28- ನಗರದ ಹಿರಿಯ ಅಕ್ಕಿ ವರ್ತಕರೂ, ತರಳಬಾಳು ಬಡಾವಣೆ ಶಿವಗೋಷ್ಠಿ ಸಮಿತಿ ಅಧ್ಯಕ್ಷರೂ ಆದ ಮಾಗನೂರು ಸೋಮಶೇಖರ ಗೌಡ್ರು ಇಂದು ಬೆಳಗಿನಜಾವ 4.30 ಗಂಟೆಗೆ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಸುಮಾರು 88 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ಬೆಂಗಳೂರಿನಲ್ಲಿ ನಡೆಯಿತು.

ಸೋಮಶೇಖರ ಗೌಡ್ರು, ಆರೂಢ ದಾಸೋಹಿ ಲಿಂ. ಮಾಗನೂರು ಬಸಪ್ಪ ಮತ್ತು ಲಿಂ. ಶ್ರೀಮತಿ ಸರ್ವಮಂಗಳಮ್ಮ ದಂಪತಿ ದ್ವಿತೀಯ ಪುತ್ರ ಹಾಗೂ ಶಿವ ಸಹಕಾರಿ ಬ್ಯಾಂಕ್ ಅಧ್ಯಕ್ಷ ಮಾಗನೂರು ಸಂಗಮೇಶ್ವರ ಗೌಡ್ರು ಸಹೋದರರು. ಅವರು, ಚೌಕಿಪೇಟೆಯಲ್ಲಿ ಮಾಗನೂರು ಬಸಪ್ಪ ಅಂಡ್ ಸನ್ಸ್ ನಡೆಸುವುದರ ಮೂಲಕ ಹೆಸರಾಂತ ಅಕ್ಕಿ ವರ್ತಕರಾಗಿದ್ದರು.

ತಮ್ಮ ವ್ಯಾಪಾರದೊಂದಿಗೆ ಸಾಮಾಜಿಕ ಸೇವಾ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಸೋಮಶೇಖರ ಗೌಡ್ರು, ಕಳೆದ 30 ವರ್ಷಗಳಿಂದ ಶಿವಗೋಷ್ಠಿ ಸಮಿತಿ ಅಧ್ಯಕ್ಷರಾಗಿ ಪ್ರತೀ ತಿಂಗಳು ಶಿವಗೋಷ್ಠಿ, ಶರಣ ಜಯಂತಿ ಸೇರಿದಂತೆ, ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ ಸಕ್ರಿಯವಾಗಿದ್ದರು.

**ಸಂತಾಪ** : ಮಾಗನೂರು ಸೋಮಶೇಖರ ಗೌಡ್ರು ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದ ಸೋಮಶೇಖರ ಗೌಡ್ರು, ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಸದಾ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡುತ್ತಿದ್ದರು ಎಂದು ವಾಮದೇವಪ್ಪ ಸ್ಮರಿಸಿದ್ದಾರೆ.

## ಇಪಿಎಫ್‌ಓ ದರ ಶೇಕಡಾ 8.25ರಲ್ಲಿ ಮುಂದುವರಿಕೆಗೆ ನಿರ್ಧಾರ

ನವದೆಹಲಿ, ಫೆ. 28 – 2024 - 25ರ ಸಾಲಿನಲ್ಲಿ ಭವಿಷ್ಯ ನಿಧಿ ಬಡ್ಡಿ ದರವನ್ನು ಶೇ.8.25ರಲ್ಲಿ ಮುಂದುವರಿಸಲು ನಿವೃತ್ತ ನಿಧಿ ಸಂಸ್ಥೆಯಾದ ಇಪಿಎಫ್‌ಓ ನಿರ್ಧರಿಸಿದೆ. 2024ರ ಫೆಬ್ರವರಿಯಲ್ಲಿ ಭವಿಷ್ಯನಿಧಿ ಬಡ್ಡಿ ದರವನ್ನು ಶೇ.8.25ಕ್ಕೆ ನಿಗದಿಪಡಿಸಲಾಗಿತ್ತು. 2022 - 23ರ ಸಾಲಿನಲ್ಲಿ ಬಡ್ಡಿ ದರ 8.15 ರಷ್ಟಿತ್ತು.

## ದೇಹದಾನಿ ಸಿ.ಡಿ. ಕುಸುಮ ನಿಧನ



ದಾವಣಗೆರೆ ವಿದ್ಯಾನಗರ ವಾಸಿ ನಿ. ಇಂಜಿನಿಯರ್ ದಿ. ಸಿ. ದೊಡ್ಡವೀರಣ್ಣ ಇವರ ಧರ್ಮಪತ್ನಿ ಹಾಗೂ ಹಳ್ಳೂರು ಹಾಲಪ್ಪ ಇವರ ಹಿರಿಯ ಪುತ್ರಿ ಸಿ.ಡಿ. ಕುಸುಮ (77 ವರ್ಷ) ಇವರು ದಿನಾಂಕ 28.02.2025ರ ಶುಕ್ರವಾರ ಬೆಳಿಗ್ಗೆ 3ಗಂಟೆಗೆ ನಿಧನರಾದರು. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಹಳ್ಳೂರು ವಂಶಸ್ಥರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಬಾಪೂಜಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ದಿನಾಂಕ 28.02.2025ರ ಶುಕ್ರವಾರ ಸಂಜೆ 4 ಗಂಟೆಗೆ ದೇಹವನ್ನು ಹಸ್ತಾಂತರಿಸಲಾಯಿತು.

## ನಗರದಲ್ಲಿ ಇಂದು

ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಇಂದು ಬೆಳಿಗ್ಗೆ 9.30 ಕ್ಕೆ ಕಾಲೇಜಿನಲ್ಲಿ ನಡೆಯಲಿದೆ.

ಡಾ.ಎಂ.ಎಂ.ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸುವರು. ಡಾ.ಹೆಚ್. ವಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಬೆಂಗಳೂರು ಗೋವಿಂದಪುರ ಪೊಲೀಸ್ ಠಾಣೆ ಸಿಪಿಐ ಹೆಚ್.ಜಯರಾಜ್, ಪ್ರಾಚಾರ್ಯ ಡಾ.ಕೆ.ಟಿ. ನಾಗರಾಜನಾಯ್ಕ ಭಾಗವಹಿಸಲಿದ್ದಾರೆ.

## ನಾಳೆ ಸತ್ಯನಾರಾಯಣ ಪೂಜೆ

ದಾವಣಗೆರೆ, ಫೆ.28 - ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಬಂಟರ ಸಂಘ ಮತ್ತು ದಾವಣಗೆರೆಯ ಕರಾವಳಿ ಮಿತ್ರ ಮಂಡಳಿ ಸಂಯುಕ್ತಾಶ್ರಯದಲ್ಲಿ ನಾಳೆ ಭಾನುವಾರ ಬೆಳಿಗ್ಗೆ ನಗರದ ಡಾ. ಶಾಮ ಸುಂದರ ಶೆಟ್ಟಿ ಬಂಟರ ಭವನದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲೆ ಸುಳ್ಯದ ಬ್ರಹ್ಮಶ್ರೀ ವೇದಮೂರ್ತಿ ಪುರೋಹಿತ ನಾಗರಾಜ್ ಭಟ್ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ಜರುಗಲಿದೆ. ಸಾರ್ವಜನಿಕರು ಭಾಗವಹಿಸ ಬಹುದು. ಸಂಪರ್ಕಿಸಿ : 9945977433.

## ಕೊಮಾರನಹಳ್ಳಿಯಲ್ಲಿ ಶ್ರೀ ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸರ ಆರಾಧನೆ


ಮಲೇಬೆನ್ನೂರು, ಫೆ. 28 - ಕೊಮಾರನಹಳ್ಳಿಯ ಶ್ರೀ ರಂಗನಾಥ ಆಶ್ರಮದಲ್ಲಿ ಶ್ರೀ ಶಂಕರಲಿಂಗ ಭಗವಾನ್ ಸರಸ್ವತೀ ಪರಮಹಂಸರ 72ನೇ ವರ್ಷದ ಆರಾಧನಾ ಮಹೋತ್ಸವವು ಈಗಾಗಲೇ ಆರಂಭವಾಗಿದ್ದು, ಮಾರ್ಚ್ 2ರ ಭಾನುವಾರದವರೆಗೂ ನಡೆಯಲಿದೆ.

ಪ್ರತಿ ನಿತ್ಯ ಬೆಳಿಗ್ಗೆ 7.30ರಿಂದ ಶ್ರೀ ಗುರು ಚರಿತ್ರೆ ಪಾರಾಯಣ, ಅಭಿಷೇಕ ಕುಂಕುಮಾರ್ಚನೆ, ಪ್ರತಿದಿನ ಸಂಜೆ 6 ಕ್ಕೆ ಶ್ರೀಗಳವರ ಜೀವನ ಚರಿತ್ರೆ ಉಪನ್ಯಾಸ ಮತ್ತು ವಿದ್ವಾಂಸರಿಂದ ಭಾರತ ವಾಚನ ನಡೆಯುತ್ತಿವೆ. ನಾಳೆ ಶನಿವಾರ ನಿತ್ಯ ಕಾರ್ಯಕ್ರಮದಲ್ಲಿ ಶ್ರೀ ಗುರು ಭಿಕ್ಷೆ ನಡೆಯಲಿದ್ದು, ನಾಡಿದ್ದು ದಿನಾಂಕ 2ರ ಭಾನುವಾರ ಶ್ರೀಗಳವರ ಆರಾಧನಾ ಕಾರ್ಯಕ್ರಮ ನಡೆಯಲಿದೆ.

## ಪಾಕಿಸ್ತಾನದ ಮಸೀದಿಯಲ್ಲಿ ಪ್ರಬಲ ಸ್ಫೋಟ : ಐವರು ಸಾವು, 20 ಜನರಿಗೆ ಗಾಯ

ಪೇಷಾವರ, ಫೆ. 28 - ಪಾಕಿಸ್ತಾನದ ಖೈಬರ್ ಪಖ್ತುಂಖ್ವ ಪ್ರಾಂತ್ಯದ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆಯ ವೇಳೆ ಪ್ರಬಲ ಸ್ಫೋಟ ಸಂಭವಿಸಿದ್ದು ಐವರು ಮೃತಪಟ್ಟಿದ್ದಾರೆ ಹಾಗೂ ಇತರೆ 20 ಜನ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸ್ಫೋಟದಲ್ಲಿ ಜಮೀಯತ್ ಉಲೇಮಾ ಇಸ್ಲಾಂ ಬಣದ ನಾಯಕ ಹಮೀದುಲ್ ಹಕ್ ಹಕ್ಕಾನಿ ಸಾವಿಗೀಡಾಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಅಕೊರಾ ಖಟ್ಟಕ್ ನಗರದ ಮದರಸಾ - ಎ - ಹಕ್ಕಾನಿಯಾ ಉಸ್ತುವಾರಿಯಾಗಿದ್ದ ಹಕ್ಕಾನಿ ಗುರಿಯಾಗಿಟ್ಟುಕೊಂಡು ಈ ದಾಳಿ ನಡೆಸಲಾಗಿದೆ. ಇದು ಆತ್ಮಹತ್ಯಾ ದಾಳಿಯಾಗಿದೆ, ಹಕ್ಕಾನಿ ಗುರಿಯಾಗಿಟ್ಟುಕೊಂಡು ಈ ದಾಳಿ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಹಂಪಿ ಉತ್ಸವದ ಯೋಗ ಪ್ರದರ್ಶನಕ್ಕೆ ಹರಿಹರದ ಕೆ.ವೈ.ಸೃಷ್ಟಿ




ದಾವಣಗೆರೆ, ಫೆ. 28- 2025 ನೇ ಸಾಲಿನ ಹಂಪಿ ಉತ್ಸವ ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ಯೋಗ ಪ್ರದರ್ಶನವು ಮಾರ್ಚ್ 2 ರ ಭಾನುವಾರ ಸಂಜೆ 5.30ಕ್ಕೆ ನಡೆಯಲಿದ್ದು, ಈ ಕಾರ್ಯಕ್ರಮ ದಲ್ಲಿ ಅಂತರರಾಷ್ಟ್ರೀಯ ಯೋಗ ಪಟು ಸೃಷ್ಟಿ ಕೆ.ವೈ. ಅವರು ಯೋಗ ನೃತ್ಯ ಪ್ರದರ್ಶನ ನೀಡಲಿದ್ದಾರೆ.

# ನಗರದಲ್ಲಿ ಇಂದು ನೃತ್ಯ ಸಮರ್ಪಣಾ ಕಾರ್ಯಕ್ರಮ

ದಾವಣಗೆರೆಯ ಶ್ರೀ ಶಾರದ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವತಿಯಿಂದ ನೃತ್ಯ ಕ್ಷೇತ್ರದ ಮಹಾನ್ ಚೇತನ ಕೀರ್ತಿಶೇಷರಾದ ರುಕ್ಮಿಣಿ ದೇವಿ ಅರುಂಡೇಲ್ ಅವರ ಸ್ಮರಣಾರ್ಥ ನೃತ್ಯ ಸಮರ್ಪಣಾ - 2025 (ಭರತ ನಾಟ್ಯ ಕಾರ್ಯಕ್ರಮ) ವು ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆವರಣದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಶ್ರೀ ಶಾರದ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಸಮರ್ಪಣಾ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ವಿಧುಷಿ ಶ್ರೀಮತಿ ಪೂರ್ಣಿಮಾ ಭಾಗವತ ಅವರಿಂದ ನಟ್ಟುವಾಂಗ, ವಿದ್ವಾನ್ ರಾಜಗೋಪಾಲ ಭಾಗವತ್ ಅವರಿಂದ ಹಾಡುಗಾರಿಕೆ ನಡೆಯಲಿದ್ದು, ಹೊಸಪೇಟೆಯ ವಿದ್ವಾನ್ ಬಿ. ಶ್ರೀನಾಥ್ ಭಟ್ ಅವರು ಮೃದಂಗ ನುಡಿಸುವರು.





ಶ್ರೀ ಶಾರದ ಸಂಗೀತ ಮತ್ತು ನೃತ್ಯ ಕಲಾ ಶಾಲೆಗೆ ಕಳೆದ 34 ವರ್ಷಗಳಿಂದ ಭಾರತೀಯ ಶಾಸ್ತ್ರೀಯ ಕಲಾ ಪ್ರಕಾರಗಳಾದ ಭರತ ನಾಟ್ಯ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ನೀಡುತ್ತಿರುವುದರ ಜೊತೆ-ಜೊತೆಗೆ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ ಎಂದು ವಿಧುಷಿ ಶ್ರೀಮತಿ ಪೂರ್ಣಿಮಾ, ವಿದ್ವಾನ್ ರಾಜಗೋಪಾಲ ಭಾಗವತ್ ತಿಳಿಸಿದ್ದಾರೆ.

ಇಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮಕ್ಕೆ ಈಶ್ವರಮ್ಮ ಶಾಲೆಯ ಅಧ್ಯಕ್ಷರಾದ ಶ್ರೀಮತಿ ಕೆ.ಆರ್. ಸುಜಾತ ಕೃಷ್ಣ, ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಎ.ಆರ್. ಉಷಾ ರಂಗನಾಥ್, ಸಿದ್ದಗಂಗಾ ಪಿಯು ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್, ಸಿದ್ದಗಂಗಾ ಶಾಲೆಯ ಸಿಬಿಎಸ್‌ಇ ಪ್ರಾಂಶುಪಾಲರಾದ ಶ್ರೀಮತಿ ಗಾಯತ್ರಿ ಎಸ್. ಚಿಮ್ಮಡ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಇದೇ ಸಂದರ್ಭದಲ್ಲಿ ಭರತ ನಾಟ್ಯ ರಂಗ ಪ್ರವೇಶ ಮಾಡಿರುವ ವಿದುಷಿ ಡಾ. ಸುನಿಧಿ ಎಂ. ಘಟಿಕರ್ ಅವರಿಗೆ ನರ್ತನ ಸಿರಿ ಪುರಸ್ಕಾರ ನೀಡಲಾಗುವುದು.

ಭರತ ನಾಟ್ಯ ವಿದ್ವತ್ ಅಂತಿಮ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿರುವ ಕು. ಬಿ. ಜ್ಯೋತಿ, ಭರತ ನಾಟ್ಯ ವಿದ್ವತ್ ಪೂರ್ವ ವಿಭಾಗದದಲ್ಲಿ ಉನ್ನತ ವಿಭಾಗದಲ್ಲಿ ತೇರ್ಗಡೆಯಾದ ಕು. ಟಿ. ತನುಶ್ರೀ, ಭರತ ನಾಟ್ಯ ಸೀನಿಯರ್ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿರುವ ಕು. ಧನ್ಯ ನಾಗೇಶ್, ಭರತ ನಾಟ್ಯ ಜ್ಯೂನಿಯರ್ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾದ ಕು. ವಿ.ಎಸ್. ಚೈತನ್ಯ ಅವರುಗಳನ್ನು ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಗುವುದು.






## ಜಗದ್ಗುರು ಗುರುಪಾದ ಮುರುಘಾ ಮಹಾಸ್ವಾಮೀಜಿ ರಥೋತ್ಸವ



ಚಿತ್ರದುರ್ಗ, ಫೆ. 28 - ಶ್ರೀ ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹಾಗೂ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ 70ನೇ ವರ್ಷದ ರಥೋತ್ಸವವು ನಗರಕ್ಕೆ ಸಮೀಪದ ಸಿಬಾರದಲ್ಲಿ ನಿನ್ನೆ ಸಂಭ್ರಮದಿಂದ ಜರುಗಿತು.

**ಸಿಬಾರದ ದನಗಳ ಜಾತ್ರೆಗೆ ವಿದ್ಯುಕ್ತ ಚಾಲನೆ**

ಈ ಬಾರಿ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ 150ನೇ ವರ್ಷದ ಜಯಂತ್ಯೋತ್ಸವವೂ ಬಂದಿರುವ ಕಾರಣ ಅವರ ಹೆಸರಿನಲ್ಲಿಯೂ ಸೇರಿದಂತೆ ನಿನ್ನೆ ಜಾತ್ರೆಗೆ ಚಾಲನೆ ನೀಡಲಾಯಿತು. ಬಸವೇಶ್ವರರು ಹಾಗೂ ಶ್ರೀ ಗುರುಪಾದ ಮುರುಘ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರವನ್ನು ಅಲಂಕೃತಗೊಂಡ ಟ್ರ್ಯಾಕ್ಟರ್‌ನಲ್ಲಿ ಶ್ರೀಮಠದಿಂದ ಜಾತ್ರೆಗೆ ತೆಗೆದುಕೊಂಡು ಹೋಗಿ ಅದರೊಂದಿಗೆ ಮೈಲಾರಲಿಂಗೇಶ್ವರ ಉತ್ಸವ ಮೂರ್ತಿಯನ್ನು ರಥದ ಮೇಲೆ ಕೂರಿಸಿ ಪೂಜಾ ವಿಧಾನಗಳನ್ನು ವಚನಗಳ ಮೂಲಕ ನೆರವೇರಿಸಿ ಸಾವಿರಾರು ಜನರ ಹರ್ಷೋದ್ಗಾರದ ನಡುವೆ ರಥೋತ್ಸವಕ್ಕೆ ಚಾಲನೆ ನೀಡಿ ರಥವನ್ನು ಎಳೆಯಲಾಯಿತು.

ಈ ಸಂದರ್ಭದಲ್ಲಿ ಬೃಹನ್ಮಠದ ಆಡಳಿತ ಮಂಡಳಿಯ ಸದಸ್ಯ ಡಾ. ಬಸವಕುಮಾರ ಮಹಾ ಸ್ವಾಮಿಗಳು ಹಾಗೂ ದಾವಣಗೆರೆ ವಿರಕ್ತ ಮಠದ ಡಾ. ಬಸವಪ್ರಭು ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಚಾಲನೆ ನೀಡಿ ರಥೋತ್ಸವದೊಂದಿಗೆ ಹೆಜ್ಜೆ ಹಾಕಿದರು.

**ದನಗಳ ಜಾತ್ರೆ :** ರಥೋತ್ಸವ ಪ್ರಾರಂಭದೊಂದಿಗೆ ದನಗಳ ಜಾತ್ರೆಗೆ ವಿಧ್ಯುಕ್ತವಾಗಿ ಚಾಲನೆ ದೊರಕಿತು. ಮಧ್ಯ ಕರ್ನಾಟಕದ ಈ ಭಾಗದ ಜನಪ್ರಿಯ ದನಗಳ ಜಾತ್ರೆಗೆ ವಿಶೇಷ ಮೆರಗು ಇದೆ.

ಈ ಸಂದರ್ಭದಲ್ಲಿ ವ್ಯವಸ್ಥಾಪನಾ ಸಮಿತಿಯ ಜಿ.ಎಂ. ಪ್ರಕಾಶ್, ಜಿ.ಎಂ. ಕುಮಾರ್, ಚಿದಾನಂದ ಮೂರ್ತಿ, ಜಿ.ಎಂ. ಸತೀಶ್, ಗೌಡರ ಜಯದೇವಪ್ಪ, ಜಿ.ಎಂ. ತಿಪ್ಪೇಸ್ವಾಮಿ, ಜಿ.ಎಂ. ಶಿವಮೂರ್ತಿ, ಗ್ರಾಮ ಪಂಚಾಯತಿ ಸದಸ್ಯರಾದ ಶಂಕರಮ್ಮ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ನರಸಿಂಹರಾಜು, ಜಿ.ಎಂ. ಶಿವಲಿಂಗಪ್ಪ, ಜಿ.ಎಂ. ಪುಟ್ಟಸ್ವಾಮಿ, ಜಂಬುನಾಥ್ ಸೇರಿದಂತೆ ಇತರರು ಭಾಗವಹಿಸಿದ್ದರು.










**ಐದನೇ ವರ್ಷದ ಪುಣ್ಯಸ್ಮರಣೆ**



ಜನನ : 17.7.1977 ಮರಣ : 01.03.2020


**ಶ್ರೀಮತಿ ವಿನೋದ ಎಸ್. ಶಿರಗಂಬಿಯವರು**

ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಿಟ್ಟುವಳ್ಳಿ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಶ್ರೀಮತಿ ಗೌರಮ್ಮ, ಶ್ರೀ ಎಸ್.ಆರ್ ಶಿರಗಂಬಿ, ನಿ. ಮುಖ್ಯೋಪಾಧ್ಯಾಯರು ಮತ್ತು ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ತರಳಬಾಳು ಬಡಾವಣೆ, ದಾವಣಗೆರೆ.








॥ ಶ್ರೀ ವಿಮಲೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಿ॥ ಶ್ರೀ ನಲ್ಲೂರು ಪಾಂಡುರಂಗ ರೇವಣಕರ್ ಇವರ ಧರ್ಮಪತ್ನಿ

**ಶ್ರೀಮತಿ ಶಕುಂತಲ ಪಾಂಡುರಂಗ ರೇವಣಕರ್**

ಇವರು ದಿ : 16.02.2025ನೇ ಭಾನುವಾರ ಬೆಳಿಗ್ಗೆ 06.07ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಧ ಮೃತರ ಆತ್ಮಶಾಂತಿಗಾಗಿ

**'ವೈಕುಂಠ ಸಮಾರಾಧನೆಯನ್ನು**

ದಿನಾಂಕ : 01.03.2025ನೇ ಶನಿವಾರ ಮಧ್ಯಾಹ್ನ : 1.30 ಗಂಟೆಗೆ, ದಾವಣಗೆರೆ ವಿನೋಬನಗರ 1ನೇ ಮೇನ್‌ನಲ್ಲಿರುವ ಶ್ರೀಮತಿ ಗೌರಮ್ಮ ನರಹರಿಶೇಟ್ ಸಭಾಭವನದಲ್ಲಿ (ಮಿನಿಹಾಲ್) ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ರಾಜೇಶ್ ಪಾಂಡುರಂಗ ರೇವಣಕರ್, ಸಂತೋಷ್ ಪಾಂಡುರಂಗ ರೇವಣಕರ್ ಮತ್ತು ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ನಲ್ಲೂರು ಕುಟುಂಬದವರು ಹಾಗೂ ಬಂಧು-ಮಿತ್ರರು.

ಮೊ. : 96320 00016, 98448 21227

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಮುದೇಗೌಡ್ರು ಎಂ. ಶಿವಾನಂದಪ್ಪ ನಿಧನ**



ದಾವಣಗೆರೆ ಸಿಟಿ, ಹಳೇಪೇಟೆ ವಾಸಿ

ದಿ॥ ಮುದೇಗೌಡ್ರ ಗೌರಮ್ಮ, ದಿ॥ ಮುದೇಗೌಡ್ರ ಶಾಂತಪ್ಪ ಇವರ ಸೊಸೆ ಶ್ರೀಮತಿ ಎಸ್.ಎನ್. ಅನುಸೂಯ ಇವರ ಪತಿ

**ಶರಣ ಮುದೇಗೌಡ್ರ ಎಂ. ಶಿವಾನಂದಪ್ಪ**

ಜೆ.ಜೆ.ಎಂ. ಮೆಡಿಕಲ್ ಕಾಲೇಜ್, ನಿವೃತ್ತ ಸಹಾಯಕ ಗ್ರಂಥಪಾಲಕರು

(76 ವರ್ಷ) ಇವರು ದಿನಾಂಕ : 27.02.2025ನೇ ಗುರುವಾರ ರಾತ್ರಿ 2.30 ಗಂಟೆಗೆ ನಿಧನರಾಗಿರುತ್ತಾರೆ. ಇವರಿಗೆ ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 01.03.2025ರ ಶನಿವಾರ ಮಧ್ಯಾಹ್ನ 12.30 ಗಂಟೆಗೆ ದೇವರಹಟ್ಟಿ ಗ್ರಾಮ, ಮುದೇಗೌಡ್ರ ಶಾಂತಿ ವನದಲ್ಲಿ ನೆರವೇರಿಸಲಾಗುವುದು.

ಅಂತಿಮ ದರ್ಶನ : ದಿನಾಂಕ : 28.02.2025ರ ಶುಕ್ರವಾರ ಸಂಜೆ 6.00 ರಿಂದ ಶನಿವಾರ 11.00 ಗಂಟೆಯವರೆಗೆ, "ಸಿಂಚನ ನಿಲಯ", #1711/29, 9ನೇ ಕ್ರಾಸ್, ಭದ್ರಾ ಕಾಲೇಜ್ ಹಿಂಭಾಗ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆಯಲ್ಲಿ ಇರಿಸಲಾಗಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**

ಫೋ. : 99804 46557, 77605 58838

# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮಾರ್ಚ್ 1, 2025




# ಮಕ್ಕಳ ಭಾವನೆಗಳು ಕಲಾಕೃತಿಗಳಾದಾಗ...

## ಕಲಾ ಗ್ಯಾಲರಿಯಲ್ಲಿ ಗಮನ ಸೆಳೆದ 'ಚಿಗುರು ಚಿತ್ತಾರ' ಸ್ಪರ್ಧೆಯಲ್ಲಿ ಮೂಡಿ ಬಂದ ಕಲಾಕೃತಿಗಳು

ದಾವಣಗೆರೆ, ಫೆ. 28-ಅದೊಂದು ಮಕ್ಕಳ ಕಲ್ಪನಾ ಲೋಕ. 250ಕ್ಕೂ ಹೆಚ್ಚು ಮಕ್ಕಳಲ್ಲಿನ ಮನಸ್ಸಿನ ಭಾವನೆಗಳು, ಕಲ್ಪನೆಗಳು ಕುಂಚದ ಮೂಲಕ ಕಲಾಕೃತಿಗಳಾಗಿ ಹೊರ ಹಮ್ಮಿದ್ದವು.

ದೃಶ್ಯಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವ ಸಂಭ್ರಮದ ಅಂಗವಾಗಿ ಯೂನಿವರ್ಸಿಟಿ ಕಾಲೇಜ್ ಆಫ್ ವಿಜುವಲ್ ಆರ್ಟ್ ಅಲುಮ್ನಿ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಚಿಗುರು ಚಿತ್ತಾರ' ಚಿತ್ರಕಲಾ ಸ್ಪರ್ಧೆಯಲ್ಲಿ ಮೂಡಿ ಬಂದ ಚಿತ್ರಗಳನ್ನು ದೃಶ್ಯಕಲಾ ಮಹಾವಿದ್ಯಾಲಯದ ಆರ್ಟ್ ಗ್ಯಾಲರಿಯಲ್ಲಿ ಶುಕ್ರವಾರ ಪ್ರದರ್ಶನಕ್ಕಿಡಲಾಗಿತ್ತು.

ಗ್ಯಾಲರಿ ಗೋಡೆಗೆ ಅಂಟಿದ್ದ ಒಂದೊಂದು ಚಿತ್ರವೂ ಒಂದೊಂದು ಕಥೆ ಹೇಳುತ್ತಿದ್ದವು. ಪುಟ್ಟ ಮಕ್ಕಳ ಅಂತರಂಗವನ್ನು ಅನಾವರಣಗೊಳಿಸಿದ್ದವು.

6 ಶಾಲೆಗಳ 1 ರಿಂದ 10ನೇ ತರಗತಿಯ ಸಾವಿರಾರು ವಿದ್ಯಾರ್ಥಿಗಳು ಕೈಯಲ್ಲಿ ಕುಂಚ ಹಿಡಿದು ತಮ್ಮ ಕಲ್ಪನೆಗಳಿಗೆ ಬಣ್ಣ ತುಂಬಿದ್ದರು. ಅವುಗಳ ಪೈಕಿ 250 ಚಿತ್ರಗಳನ್ನು ಮಾತ್ರ ಆಯ್ಕೆ ಮಾಡಿ ಪ್ರದರ್ಶನಕ್ಕಿಡಲಾಗಿತ್ತು.

ಅಂದ ಹಾಗೆ ಅನುಭವಿ ಕಲಾವಿದರ ಚಿತ್ರಗಳೇ ಪ್ರದರ್ಶನಗೊಳ್ಳುತ್ತಿದ್ದ ಈ ಸ್ಥಳದಲ್ಲಿ ಮಕ್ಕಳ ಚಿತ್ರಗಳನ್ನು ನೋಡುವುದೇ ಚಂದ ಎನಿಸಿತ್ತು. ಪ್ರತಿಯೊಬ್ಬರೂ ತಮ್ಮ ಆಲೋಚನೆ ಕ್ರಮಗಳಿಗೆ ಅನುಗುಣವಾಗಿ ಒಂದೊಂದು ಚಿತ್ರ ಬಿಡಿಸಿದ್ದರು.

ಬಿಳಿ ಹಾಳೆಯ ಮೇಲೆ ಬಣ್ಣಗಳಿಗೆ ನೀರು ಹಾಕಿ, ಕುಂಚದಿಂದ ಕೆಲವರು ಚಿತ್ರ ರಚಿಸಿದ್ದರೆ, ಇನ್ನೂ ಕೆಲವರು ಕ್ರೆಯಾನ್, ಸ್ಕೆಚ್ ಪೆನ್‌ಗಳನ್ನು ಬಳಸಿ ತಮ್ಮ ಪರಿಕಲ್ಪನೆಗೆ ಚಿತ್ರದ (2ನೇ ಪುಟಕ್ಕೆ)

### ಕಲಾ ಕಾಲೇಜಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಕೆ

#### ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ. ರಮೇಶ್ ಕಳವಳ

ದಾವಣಗೆರೆ, ಫೆ. 28- ವಿದ್ಯಾರ್ಥಿಗಳಲ್ಲಿ ಕಲೆಯ ಮೇಲಿನ ಆಸಕ್ತಿ ಕಡಿಮೆ ಆಗುತ್ತಿರುವುದರಿಂದ ಕಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗುತ್ತಿದೆ ಎಂದು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ. ರಮೇಶ್ ಕಳವಳ ವ್ಯಕ್ತಪಡಿಸಿದರು.

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವ ಸಂಭ್ರಮದ ಅಂಗವಾಗಿ ಯೂನಿವರ್ಸಿಟಿ ಕಾಲೇಜ್ ಆಫ್ ವಿಜುವಲ್ ಆರ್ಟ್ ಅಲುಮ್ನಿ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಚಿಗುರು ಚಿತ್ತಾರ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಮಕ್ಕಳು ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸಾಧನೆ ಮಾಡಲಾಗದು. ಪೋಷಕರು ಮಕ್ಕಳಲ್ಲಿನ ಪ್ರತಿಭೆಯನ್ನು ಗುರುತಿಸಿ, ಕಲಾ ಕ್ಷೇತ್ರದಲ್ಲಿ ಮಕ್ಕಳಿಗೆ ಆಸಕ್ತಿ ಇದ್ದರೆ ಅದನ್ನು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳಲ್ಲಿ ಚಿತ್ರ ಕಲಾವಿದ ಅಥವಾ ಶಿಲ್ಪ ಕಲಾವಿದನಾಗುವ ಅವಕಾಶಗಳು ಸಾಕಷ್ಟಿರುತ್ತವೆ. ದೃಶ್ಯಕಲಾ ಕಾಲೇಜಿನಲ್ಲಿ ಹಲವು ವಿಭಾಗಗಳಿವೆ. 12ನೇ ತರಗತಿ ನಂತರ ನಾಲ್ಕು ವರ್ಷದ ಕೋರ್ಸ್‌ಗೆ ಸೇರುವ ಮೂಲಕ ಚಿತ್ರಕಲಾವಿದ, ಫೋಟೋ ಗ್ರಾಫರ್, ಆನಿಮಿಟೇರ್, ಗ್ರಾಫಿಕ್ ಡಿಸೈನರ್ (2ನೇ ಪುಟಕ್ಕೆ)



# ರಾಜ್ಯದಲ್ಲಿ ಹಕ್ಕಿ ಜ್ವರ ತೀವ್ರ

## ಸಾಂಕ್ರಾಮಿಕ ರೋಗದ ಬಗ್ಗೆ ಕಟ್ಟೆಚ್ಚರ ವಹಿಸಲು ಸರ್ಕಾರದ ಆದೇಶ

ಬೆಂಗಳೂರು,ಫೆ.28- ಕೋಳಿಗಳಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ತೀವ್ರ ಕಟ್ಟೆಚ್ಚರ ವಹಿಸುವಂತೆ ಸರ್ಕಾರ ಆದೇಶ ಮಾಡಿದೆ.

ಚಿಕ್ಕಬಳ್ಳಾಪುರ, ಬಳ್ಳಾರಿ, ರಾಯಚೂರು, ಕೊಪ್ಪಳ, ತುಮಕೂರಿನ ಕೆಲವು ಪ್ರದೇಶ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಈ ಸಾಂಕ್ರಾಮಿಕ ರೋಗ ಕಂಡು ಬಂದಿದೆ.

ಸಾಮೂಹಿಕವಾಗಿ ಕೋಳಿಗಳು ಸಾಯುತ್ತಿರುವ ಹಿನ್ನೆಲೆಯಲ್ಲಿ ರೋಗ ಪತ್ತೆಗೆ ಭೂಪಾಲ್‌ನ ಸಂಶೋಧನಾ ಕೇಂದ್ರಕ್ಕೆ ಮೃತ ಕೋಳಿಗಳ ಸ್ಯಾಂಪಲ್ ಕಳುಹಿಸಲಾಗಿದೆ.

ರಾಜ್ಯದಲ್ಲಿ ಹಕ್ಕಿ ಜ್ವರ ಕಾಣಿಸಿಕೊಳ್ಳುತ್ತಿದ್ದಂತೆ ಕುಕ್ಕುಟ ಉದ್ಯಮ ನೆಲ ಕಚ್ಚಿದೆ, ಮುಂದಿನ ದಿನಗಳಲ್ಲಿ ಕೋಳಿ ಸಾಕಾಣಿಕೆದಾರರಿಗೆ ನಷ್ಟ ಉಂಟಾಗುವ ಸಾಧ್ಯತೆಗಳು ಕಂಡುಬರುತ್ತಿವೆ.

ರೋಗ ಕಂಡುಬಂದ ಕಡೆಗಳ ಪ್ರದೇಶದ ಮೂರು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪಶುಸಂಗೋಪನಾ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ಎಲ್ಲಾ ಕೋಳಿಗಳನ್ನು ಸಾಯಿಸುತ್ತಿದೆ.



ಪ್ರಾಥಮಿಕ ವರದಿ ಪ್ರಕಾರ ಮೃತ ಕೋಳಿಗಳಲ್ಲಿ ಎಚ್5ಎನ್ ಏವಿಯನ್ ಇನ್ಫ್ಲುಯೆನ್ಸಾ ರೋಗಾಣು ಇರುವುದು ಪತ್ತೆಯಾಗಿದೆ.

### ಸಾಮೂಹಿಕವಾಗಿ ಸಾಯುತ್ತಿರುವ ಕೋಳಿಗಳು, ಕುಕ್ಕುಟ ಉದ್ಯಮಕ್ಕೆ ಬಿತ್ತು ದೊಡ್ಡ ಪೆಟ್ಟು.!

ಇದು ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟಲು ಎರಡೂ ಇಲಾಖೆಗಳು ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದಲ್ಲದೆ, ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ಈ ರೋಗ ಪಕ್ಷಿಗಳಿಂದ ಕೋಳಿಗೆ ಹರಡಿರಬಹುದು ಎಂಬ ಸಂಶಯವಿದೆ, ಆದರೆ, ಇದುವರೆಗೂ ಈ ರೋಗ ಮನುಷ್ಯರಿಗೆ ತಗುಲಿರುವ ವರದಿ ಇಲ್ಲ. ಮೊದಲು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾಣಿಸಿಕೊಂಡ ಹಕ್ಕಿ ಜ್ವರ ಎರಡು-ಮೂರು ದಿನಗಳಲ್ಲೇ ರಾಜ್ಯದ ಇತರೆ ಭಾಗಗಳಿಗೆ ಹರಡಿರುವುದರಿಂದ ಆರೋಗ್ಯ ಇಲಾಖೆ ಆತಂಕಗೊಂಡಿದೆ.

ಈ ಹಿನ್ನೆಲೆಯಲ್ಲೇ ಕಟ್ಟೆಚ್ಚರ ವಹಿಸುವ ಜೊತೆಗೆ ವಿವಿಧ ಭಾಗಗಳ ಕೋಳಿಗಳ ರೋಗ ಪರೀಕ್ಷೆಗೆ ಮುಂದಾಗಿದೆ.

ಬೇಸಿಗೆ ಸಂದರ್ಭದಲ್ಲಿ ಕೋಳಿಗಳಿಗೆ ಹಕ್ಕಿ ಜ್ವರ ತಗಲುವುದು ಸಾಮಾನ್ಯ, ರೋಗಕ್ಕೆ ತುತ್ತಾದ ಕೋಳಿ ಮಾಂಸ ಸೇವನೆ ಮಾಡಿದರೆ ಮನುಷ್ಯನಿಗೂ ಸಾಂಕ್ರಾಮಿಕ ರೋಗ ತಗಲುವ ಸಾಧ್ಯತೆ ಇದೆ.

ಕೋಳಿ ಮಾಂಸ ತಿನ್ನುವ ಮೊದಲು ಹೆಚ್ಚಿನ ಉಷ್ಣತೆಯಲ್ಲಿ ಬೇಯಿಸಿ ಬಳಸಿದರೆ ದುಷ್ಪರಿಣಾಮ ಉಂಟಾಗದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಹಕ್ಕಿ ಜ್ವರ ಕಾಣಿಸಿಕೊಂಡಿರುವ ಪ್ರದೇಶಕ್ಕೆ ಹತ್ತಿರದ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಹಾಸಿಗೆಗಳನ್ನು ಮೀಸಲಿಡುವಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಇಲಾಖೆ ಸೂಚಿಸಿದೆ.

ಅಲ್ಲದೆ, ರೋಗ ಕಾಣಿಸಿಕೊಂಡ ವ್ಯಕ್ತಿಗಳಿಗೆ ಅಗತ್ಯ ಔಷಧ ನೀಡಲು ಸಿದ್ಧತೆ ಮಾಡಿಕೊಳ್ಳುವಂತೆಯೂ ತಿಳಿಸಲಾಗಿದೆ.

# ವಿಜೃಂಭಣೆಯ ಕುರುವತ್ತಿ ರಥೋತ್ಸವ



ಹೊಳಲು, ಫೆ.28- 'ಬಸವಣ್ಣ ದೊರೆಯೇ ನಿನಗಾರು ಸರಿಯೇ, ಸರಿ ಸರಿ ಎಂದವರ ಹಲ್ಲುಮುರಿಯೇ ಬಹುಪರಾಕ್', 'ಹರ ಹರ ಮಹಾದೇವ' ಎಂಬ ಹರ್ಷೋದ್ಗಾರದೊಂದಿಗೆ ನಾಡಿನ ಐತಿಹಾಸಿಕ ಸುಕ್ಷೇತ್ರ ಹೂವಿನಹಡಗಲಿ ತಾಲ್ಲೂಕು ಕುರುವತ್ತಿಯ ಶ್ರೀ ಬಸವೇಶ್ವರ ಹಾಗೂ ಮಲ್ಲಿಕಾರ್ಜುನ ರಥೋತ್ಸವವು ಶುಕ್ರವಾರ ಸಂಜೆ ಲಕ್ಷಾಂತರ ಭಕ್ತರ ಮಧ್ಯೆ ಸಂಭ್ರಮದಿಂದ ನೆರವೇರಿತು.

ಭಾರೀ ಗಾತ್ರದ ರುದ್ರಾಕ್ಷಿ ಮಾಲೆ ಹಾಗೂ ಹೂಮಾಲೆಗಳೊಂದಿಗೆ ರಥವನ್ನು ಅಲಂಕರಿಸಿಲಾಗಿತ್ತು. ಬಾಜಾ ಭಜಂತ್ರಿ, ನಂದಿಕೋಲು, (2ನೇ ಪುಟಕ್ಕೆ)

# ಬಿಎಸ್‌ವೈಗೆ ಹೈಕೋರ್ಟ್ ಸಮನ್ಸ್

## ಮಾ.15 ರಂದು ವಿಚಾರಣೆಗೆ ಖುದ್ದು ಹಾಜರಾಗಲು ಸೂಚನೆ



ಬೆಂಗಳೂರು,ಫೆ.28- ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಬೆಂಗಳೂರಿನ 1ನೇ ತ್ವರಿತಗತಿ ನ್ಯಾಯಾಲಯದಲ್ಲಿ ಮಾರ್ಚ್ 15 ರಂದು ಖುದ್ದು ಹಾಜರಾಗಿ ವಿಚಾರಣೆ ಎದುರಿಸುವಂತೆ ಸೂಚಿಸಲಾಗಿದೆ.

ಯಡಿಯೂರಪ್ಪ ಅಲ್ಲದೆ, ಸಹ ಆರೋಪಿಗಳಾದ ಅರುಣಾ, ರುದ್ರೇಶ್, ಮರುಳುಸಿದ್ದಯ್ಯ, ಜೆ. ಮರಿಸ್ವಾಮಿ ಅವರಿಗೂ ಸಮನ್ಸ್ ಜಾರಿ ಮಾಡಲಾಗಿದೆ.

ಪೋಕ್ಸೋ ಪ್ರಕರಣದಲ್ಲಿ ಯಡಿಯೂರಪ್ಪ ಅವರಿಗೆ ಕೆಲವು ದಿನಗಳ ಹಿಂದಷ್ಟೇ ಕರ್ನಾಟಕ ಹೈಕೋರ್ಟ್‌ನಿಂದ ತಾತ್ಕಾಲಿಕ ರಿಲೀಫ್ ನೀಡಲಾಗಿತ್ತು.

ಪ್ರಕರಣ ರದ್ದತಿ ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಧಾರವಾಡ ಪೀಠ, ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು.

ಪ್ರಕರಣ ರದ್ದು ಮಾಡಲು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪೀಠ ನಿರಾಕರಿಸಿತ್ತಾದರೂ, ಬಂಧನದಿಂದ ರಿಲೀಫ್ ದೊರೆತಿತ್ತು, ಆದರೆ, ಇದೀಗ ಯಡಿಯೂರಪ್ಪ ವಿಚಾರಣೆ ಎದುರಿಸಲೇ ಬೇಕಿದೆ.

ಪ್ರಕರಣದ ಹಿನ್ನೆಲೆ ನೋಡಿದಾಗ, 17 ವರ್ಷದ ಬಾಲಕಿ ಮೇಲೆ ಯಡಿಯೂರಪ್ಪ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪವನ್ನು 2024ರ ಮಾರ್ಚ್‌ನಲ್ಲಿ ಹೊರಿಸಲಾಗಿತ್ತು.

### ಪೋಕ್ಸೋ ಪ್ರಕರಣ: ಸಹ ಆರೋಪಿಗಳಾದ ಅರುಣಾ, ರುದ್ರೇಶ್, ಮರುಳುಸಿದ್ದಯ್ಯ, ಜೆ.ಮರಿಸ್ವಾಮಿ ಅವರಿಗೂ ಸಮನ್ಸ್ ಜಾರಿ

ಸಂತ್ರಸ್ತೆ ಬಾಲಕಿ ತಾಯಿ ಈ ಆರೋಪ ಮಾಡಿದ ಹಿನ್ನೆಲೆಯಲ್ಲಿ ಯಡಿಯೂರಪ್ಪ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಬೆಂಗಳೂರಿನ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಸಹಾಯ ಕೇಳಲು ಹೋಗಿದ್ದಾಗ (2ನೇ ಪುಟಕ್ಕೆ)

# ವಿವಿ ನಾಮನಿರ್ದೇಶಿತ ಸದಸ್ಯತ್ವ ಕೊಡಿಸುವುದಾಗಿ ಹೇಳಿ ವಂಚನೆ

ದಾವಣಗೆರೆ, ಫೆ.28- ರಾಜೀವ್ ಗಾಂಧಿ ವಿವಿ ಮತ್ತು ವಿ.ಟಿ.ಯು ನಲ್ಲಿ ರಾಜ್ಯಪಾಲರಿಂದ ನಾಮನಿರ್ದೇಶಿತ ಸದಸ್ಯತ್ವ ಕೊಡಿಸುವುದಾಗಿ ಹೇಳಿ 2.78 ಲಕ್ಷ ರೂ. ಪಡೆದು ವಂಚನೆ ಮಾಡಿದ್ದ ಆರೋಪಿಯನ್ನು ದಾವಣಗೆರೆ ಸಿಇಎನ್ ಪೊಲೀಸರು ಬಂಧಿಸಿದ್ದಾರೆ.

ಚಿತ್ರದುರ್ಗ ತಾಲ್ಲೂಕು ಹಲ್ಲೇಹಾಲ್ ಗ್ರಾಮದ ಕೃಷಿ ಕೆಲಸ ಮಾಡಿಕೊಂಡಿದ್ದ ಹೆಚ್.ಟಿ ಸದ್ರುಲ್ಲಾ ಖಾನ್ ಬಂಧಿತ ಆರೋಪಿ.

ಕಳೆದ ಫೆಬ್ರವರಿ 20ರಂದು ಸದ್ರುಲ್ಲಾ ಖಾನ್, 'ನಾನು ರಾಜ್ಯಪಾಲರ ಸೆಕ್ರೆಟರಿಯೆಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಯುನಿರ್ವಸಿಟಿಗಳಿಗೆ ರಾಜ್ಯಪಾಲರ ನಾಮನಿರ್ದೇಶಿತ ಸದಸ್ಯತ್ವಗಳ ಹೆಸರನ್ನು ನಾನೇ ನಾಮಿನೇಟ್ ಮಾಡುತ್ತೇನೆ ಎಂದು ದಾವಣಗೆರೆ ನಗರದ ವೈದ್ಯರಿಗೆ ಫೋನ್ ಕರೆ ಮಾಡಿದ್ದಾನೆ.

### ಚಿತ್ರದುರ್ಗ ತಾಲ್ಲೂಕು ಹಲ್ಲೇಹಾಲ್‌ನ ಸದ್ರುಲ್ಲಾ ಖಾನ್ ಬಂಧನ

ವೈದ್ಯರಿಗೆ ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ಬೆಂಗಳೂರು ಮತ್ತು ವೈದ್ಯರ ಪತ್ನಿಗೆ ವಿ.ಟಿ.ಯು ಬೆಳಗಾವಿಯಲ್ಲಿ ರಾಜ್ಯಪಾಲರ ನಾಮನಿರ್ದೇಶಿತ ಸದಸತ್ವ ಕೊಡಿಸುವುದಾಗಿ ಹೇಳಿ ಒಟ್ಟು 2,78,720 ರೂಪಾಯಿಗಳನ್ನು ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಕೊಂಡು ವಂಚನೆ ಮಾಡಿದ್ದಾನೆ.

ವೈದ್ಯ ದಂಪತಿಗಳು ವಂಚನೆಗೊಳಗಾಗಿದ್ದು ತಿಳಿದು ಹಣ ವಾಪಾಸ್ ಕೇಳಿದಾಗ, ಆರೋಪಿಯು ನಿಮ್ಮ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿ ನಿಮ್ಮ ಕೆ.ಎಂ.ಸಿ ರಿಜಿಸ್ಟರ್ ಬ್ಲಾಕ್ ಮಾಡಿಸುವುದಾಗಿ ಬೆದರಿಸಿದ್ದಾನೆ.

ಈ ಬಗ್ಗೆ ದಾವಣಗೆರೆ ಸಿ.ಇ.ಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗಿತ್ತು.

ಸಿ.ಇ.ಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕಿ ಪದ್ಮಶ್ರೀ ಗುಂಜೀಕರ್ (2ನೇ ಪುಟಕ್ಕೆ)

# ವರ್ಷಾಂತದ ಒಳಗೆ ಮುಕ್ತ ವ್ಯಾಪಾರಿ ಒಪ್ಪಂದ

ನವದೆಹಲಿ, ಫೆ. 28 - ಈ ವರ್ಷದ ಅಂತ್ಯದೊಳಗೆ ಮುಕ್ತ ವ್ಯಾಪಾರಿ ಒಪ್ಪಂದ (ಎಫ್.ಟಿ.ಐ.) ಜಾರಿಗೆ ತರಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಯುರೋಪ್ ಆಯೋಗದ ಅಧ್ಯಕ್ಷೆ ಉರ್ಸುಲ ವಾನ್ ಡೆರ್ ಲೆಯನ್ ಸಮ್ಮತಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಲು ಉದ್ದೇಶಿಸಿರುವ ಹೆಚ್ಚಿನ ತೆರಿಗೆಯು ವಿಶ್ವದಾದ್ಯಂತ ಪ್ರಭಾವ ಬೀರಲಿದೆ. ಈ ಹಿನ್ನೆಲೆಯಲ್ಲಿ ಒಪ್ಪಂದ ಪ್ರಾಮುಖ್ಯತೆ ಪಡೆದುಕೊಂಡಿದೆ.

### ಭಾರತ ಮತ್ತು ಯುರೋಪ್ ಒಕ್ಕೂಟದ ಮಹತ್ವದ ನಿರ್ಧಾರ

ಇಂಡೋ-ಪೆಸಿಫಿಕ್ ವಲಯದಲ್ಲಿ ರಕ್ಷಣಾ ಸಹಕಾರ ವಿಸ್ತರಿಸಲೂ ಸಹ ಉಭಯ ನಾಯಕರು ನಿರ್ಧರಿಸಿದ್ದಾರೆ. ಜಪಾನ್ ಹಾಗೂ ದಕ್ಷಿಣ ಕೊರಿಯಾಗಳ ಜೊತೆಗೂಡಿ ಭಾರತದ ಜೊತೆ ರಕ್ಷಣಾ ಸಂಬಂಧ ಬಲಪಡಿಸಲಾಗುವುದು ಎಂದು ಉರ್ಸುಲ ಹೇಳಿದ್ದಾರೆ.

ಸಮಾಲೋಚನೆ ಅಂತಿಮವಾದಲ್ಲಿ ಇದು ಜಾಗತಿಕವಾಗಿ ದೊಡ್ಡ ವ್ಯಾಪಾರಿ ಒಪ್ಪಂದವಾಗಲಿದೆ. (2ನೇ ಪುಟಕ್ಕೆ)

# ಲೆಕ್ಕಪತ್ರಗಳ ವಂಚನೆ : ಬ್ಯಾಂಕುಗಳ ಕಾಪಿ - ಪೇಸ್ಟ್ ಆದೇಶಕ್ಕೆ ಹೈಕೋರ್ಟ್ ತರಾಟೆ

ಮುಂಬೈ, ಫೆ. 28 - ಲೆಕ್ಕಪತ್ರಗಳ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳು 'ಕಟ್ ಕಾಪಿ ಪೇಸ್ಟ್' (ಹಳೆಯ ಆದೇಶಗಳನ್ನು ನಕಲು ಮಾಡುವ) ಆದೇಶಗಳನ್ನು ಹೊರಡಿಸುತ್ತಿವೆ ಎಂದು ಬಾಂಬೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ತಮ್ಮ ಸಾಲ ಖಾತೆಯನ್ನು ವಂಚನಾತ್ಮಕ ಎಂದು ಆದೇಶಿಸಿರುವ ಬಗ್ಗೆ ಉದ್ಯಮಿ ಅನಿಲ್ ಅಂಬಾನಿ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ರೇವತಿ ಮೊಹಿತೆ ದೆರೆ ಹಾಗೂ ನೀಲಾ ಗೋಖಲೆ ಅವರನ್ನು ಒಳಗೊಂಡ ಪೀಠ ಈ ಟಿಪ್ಪಣಿ ಮಾಡಿದೆ.

ನನ್ನ ಖಾತೆ ಕುರಿತು ಆದೇಶಿಸುವುದಕ್ಕೆ ಮುಂಚೆ ನನ್ನ ನಿಲುವು ಪಡೆದಿಲ್ಲ. ಯಾವ ಆಧಾರದ ಮೇಲೆ ತಮ್ಮ ಖಾತೆಯ ಕುರಿತು ಆದೇಶ ಹೊರಡಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಅನಿಲ್ ಅಂಬಾನಿ ಹೈಕೋರ್ಟ್ ಎದುರು ತಿಳಿಸಿದ್ದರು.

ಬ್ಯಾಂಕುಗಳು ರಿಸರ್ವ್ ಬ್ಯಾಂಕ್ ಮಾರ್ಗಸೂಚಿ ಪಾಲಿಸದೆ ಖಾತೆಗಳನ್ನು ವಂಚನಾತ್ಮಕ ಇಲ್ಲವೇ ಉದ್ದೇಶಪೂರ್ವಕ ಬಾಕಿದಾರ ಎಂದು ಆದೇಶ ಹೊರಡಿಸುತ್ತಿವೆ. ಇಂತಹ ಹಲವು ಪ್ರಕರಣಗಳು ನ್ಯಾಯಾಲಯದ ಎದುರು ಬಂದಿವೆ ಎಂದು ಹೈಕೋರ್ಟ್ ಪೀಠ ತಿಳಿಸಿದೆ.

ಬ್ಯಾಂಕುಗಳು 'ಕಟ್ ಕಾಪಿ ಪೇಸ್ಟ್' ಮೂಲಕ ಆದೇಶಗಳನ್ನು ಹೊರಡಿಸುವಂತಿಲ್ಲ. ಈ ವಿಷಯದಲ್ಲಿ ವಿವೇಚನೆ ಬಳಸಬೇಕಾಗುತ್ತದೆ. ಅಂತಿಮವಾಗಿ ಇದು ಸಾರ್ವಜನಿಕರ ಹಣವಾಗಿದೆ. ಈ ರೀತಿ ಉದಾಸೀನವಾಗಿ ಆದೇಶ ಹೊರಡಿಸಬಾರದು ಎಂದು ಪೀಠ ಹೇಳಿದೆ.

# ಉಕ್ಕಡಗಾತ್ರಿ : ಅಜ್ಜಯ್ಯನ ಜಾತ್ರೆಗೆ ಚಾಲನೆ



ಮಲೇಬೆನ್ನೂರು, ಫೆ, 28 - ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಒಂದು ವಾರ ಕಾಲ ನಡೆಯುವ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ನಂದಿಗುಡಿ ವೃಷಭಪುರಿ ಮಹಾಸಂಸ್ಥಾನ ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಇಂದು ಬೆಳಿಗ್ಗೆ ನಂದಿ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಪ್ರಯಾಗ್ ರಾಜ್‌ನಲ್ಲಿ ಜರುಗಿದ ಮಹಾ ಕುಂಭಮೇಳವು ವಿಶ್ವದ ಪ್ರಮುಖ ಆಧ್ಯಾತ್ಮಿಕ ಕೂಟಗಳಲ್ಲಿ ಮೊದಲ ಸ್ಥಾನ ಪಡೆದಿದ್ದು ಕೋಟ್ಯಾಂತರ ಭಕ್ತರನ್ನು ಆಚರಣೆ ಮತ್ತು ಭಕ್ತಿಯಿಂದ ಒಟ್ಟುಗೂಡಿಸಿದೆ. ವಿಶಿಷ್ಟವಾದ ಈ ಮಹಾ ಕುಂಭಮೇಳ ನಮ್ಮಗಳ ಭಾಗ್ಯದ ಜೀವಿತಾವಧಿಯಾಗಿದೆ. ಅಂತಹ ಸಾಲಿನಲ್ಲೇ ಪವಾಡ ಪುರುಷ ಕರಿಬಸವೇಶ್ವರ ಅಜ್ಜಯ್ಯ ಭಕ್ತರನ್ನು ಪೊರೆಯುವ ಆರಾಧ್ಯ ದೈವ ಎಂದು ಹೇಳಿದರು.

ಗದ್ದುಗೆ ಟ್ರಸ್ಟ್ ಕಮಿಟಿಯ ಕಾರ್ಯದರ್ಶಿ ಎಸ್. ಸುರೇಶ್ ಮಾತನಾಡಿ, ಅಜ್ಜಯ್ಯನ ದರ್ಶನಕ್ಕೆ ಬರುವ ಭಕ್ತರಿಗೆ ಎಲ್ಲಾ ತರಹದ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ತಿಳಿಸಿದರು.

ಗದ್ದುಗೆ ಟ್ರಸ್ಟ್ ಕಮಿಟಿಯ ಟ್ರಸ್ಟಿಗಳಾದ ಜಿಗಳಿ ಇಂದೂಧರ್ ಮಾತನಾಡಿ, ಸುಕ್ಷೇತ್ರ ಉಕ್ಕಡಗಾತ್ರಿಗೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು ಭಕ್ತರ ಅನುಕೂಲಕ್ಕಾಗಿ ವಸತಿ ಮತ್ತು ದಾಸೋಹ ವ್ಯವಸ್ಥೆಯನ್ನು ಭಕ್ತರ ನೆರವಿನಲ್ಲಿಯೇ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಜಾತ್ರೆ ಅಂಗವಾಗಿ ಮಾರ್ಚ್ 4 ರಂದು ದಾವಣಗೆರೆಯ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಬೃಹತ್ ಆರೋಗ್ಯ ಮೇಳವನ್ನು ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಉದ್ಘಾಟಿಸಲಿದ್ದಾರೆ.

ಟ್ರಸ್ಟಿ ವಿವೇಕಾನಂದ ಪಾಟೀಲ್, ಶಿಕ್ಷಕ ಮಹಾಂತಯ್ಯ ಚೊಗಚಿಕೊಪ್ಪ ಮಾತನಾಡಿದರು.

ಟ್ರಸ್ಟ್ ಕಮಿಟಿಯ ಪ್ರಕಾಶ್ ಕೋಟೇರ್, ಗದಿಗೆಪ್ಪ ಹೊಸಳ್ಳಿ, ಗದಿಗಯ್ಯ ಪಾಟೀಲ್, ನಾಗರಾಜ್ ದಿಲ್ಲಿವಾಲ, (2ನೇ ಪುಟಕ್ಕೆ)

# ನಾಳೆಯಿಂದ ರಂಜಾನ್ ಉಪವಾಸ

ದಾವಣಗೆರೆ ಫೆ 28- ರಾಜ್ಯಾದ್ಯಂತ ಎಲ್ಲಿಯೂ ಸಹ ಚಂದ್ರ ಗೋಚರದ ಮಾಹಿತಿ ಲಭ್ಯವಾಗದ ಕಾರಣ ನಾಡಿದ್ದು ದಿನಾಂಕ ದಿನಾಂಕ 2ರ ಭಾನುವಾರ ರಂಜಾನ್ ಮಾಸದ ಉಪವಾಸ (ರೋಜಾ) ಪ್ರಾರಂಭವಾಗಲಿದೆ.

ಮೂವತ್ತು ದಿನಗಳ ಕಾಲ ಉಪವಾಸ ಆಚರಿಸುವ ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾಗಿರುವ ರಂಜಾನ್ ತಿಂಗಳಲ್ಲಿ ಜಕಾತ್, ಫಿತ್ರಾ, ಬಡವರಿಗೆ, ನಿರ್ಗತಿಕರಿಗೆ, ದಾನ ನೀಡಿ ಪ್ರಾರ್ಥನೆ (ನಮಾಜ್) ಸಲ್ಲಿಸುವ ಮೂಲಕ ಹಬ್ಬವನ್ನು ಆಚರಿಸುತ್ತಾರೆ.

# ಡಿಸೆಂಬರ್ ಚತುರ್ಥದಲ್ಲಿ ಶೇ. 6.2ರ ಬೆಳವಣಿಗೆ

ನವದೆಹಲಿ, ಫೆ. 28 - ಡಿಸೆಂಬರ್ ಚತುರ್ಥದಲ್ಲಿ ದೇಶದ ಆರ್ಥಿಕ ಬೆಳವಣಿಗೆ ಶೇ.6.2ರಷ್ಟಿದೆ. ಜುಲೈ-ಸೆಪ್ಟೆಂಬರ್ ಚತುರ್ಥದಲ್ಲಿ ಬೆಳವಣಿಗೆ ದರ ಶೇಕಡ 5.6ಕ್ಕೆ ಇಳಿಕೆಯಾಗಿತ್ತು. ಹಿಂದಿನ ಚತುರ್ಥಗಳಿಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಬೆಳವಣಿಗೆ ದರದಲ್ಲಿ ಚೇತರಿಕೆಯಾಗಿದೆ. (2ನೇ ಪುಟಕ್ಕೆ)

# ಅಭಿನಂದನೆಗಳು



ದಾವಣಗೆರೆ ತಾಲ್ಲೂಕು ಆಲೂರುಹಟ್ಟಿ ಗ್ರಾಮದ

**ಶ್ರೀಯುತ ಜಯರಾಜ್ ಹೆಚ್.**

ಅವರು, ಸರ್ಕಲ್ ಇನ್‌ಸ್ಪೆಕ್ಟರ್ ಹುದ್ದೆಯಿಂದ ಪೊಲೀಸ್ ಉಪಾಧೀಕ್ಷಕರ (DYSP) ಹುದ್ದೆಗೆ 'ಪದೋನ್ನತಿ' ಪಡೆದಿದ್ದಾರೆ. ನಮ್ಮ ಆತ್ಮೀಯ ಸ್ನೇಹಿತರಾದ ಜಯರಾಜ್ ಅವರಿಗೆ

**ಹೃದಯಪೂರ್ವಕ ಅಭಿನಂದನೆಗಳು.**

**ಶ್ರೀಯುತ ಜಯರಾಜ್ ಹೆಚ್.**
ಪೊಲೀಸ್ ಉಪಾಧೀಕ್ಷಕರು (DYSP)



ರಮೇಶ್ ರಾಥೋಡ್
ಮಾರುಕಟ್ಟೆ ಅಧಿಕಾರಿ
CP ಸೀಡ್ಸ್, ಬೆಂಗಳೂರು

ಅರುಣ್ ಕೆರನಹಳ್ಳಿ ಬಿ.ಜೆ. ತುಂಬಿಗೆರೆ
ಮಾಲೀಕರು, ಸುಬ್ರಹ್ಮಣ್ಯ ಮೋಟಾರ್ಸ್, ಮಲೇಬೆನ್ನೂರು.

ಹಾಲೇಶ್
ಮೆಡಿಕಲ್ ರೆಪ್ರೆಸೆಂಟೇಟಿವ್
ಸೇವಾನಗರ

✦ ಅಬ್ದುಲ್ ರೆಹಮಾನ್ ✦ ರೂಪ ಹೆಚ್.ಎಸ್. (Banglore) ✦ ವಿದ್ಯಾ ಬಡದಾಳ್ (PDO)
✦ ರಾಘುವೇಂದ್ರ ಮೋಹರೆ (ಅಡ್ವೊಕೇಟ್) ✦ ಉಮೇಶ್ ತಾಳಿಕಟ್ಟೆ (PDO)

**MSB ಕಾಲೇಜು ಸ್ನೇಹಿತರ ಬಳಗ 1998–2001**





"EDUCATION BREEDS CONFIDENCE, CONFIDENCE BREEDS HOPE. HOPE BREEDS PEACE."

**KSEAB II - PUC**

ಪರಿಕ್ಷೆಗೆ ಹಾಜರಾಗುತ್ತಿರುವ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಶುಭವಾಗಲಿ, ಯಶಸ್ಸು ನಿಮ್ಮದಾಗಲಿ.

BEST WISHES
Smt. SHASHIKALA E R
PRESIDENT

**BEST OF LUCK** Dear STUDENTS

**REGISTRATIONS OPENED FOR PRE-PRIMARY TO PUC**

YOGI RAM
SHASHI EDUCATIONAL TRUST (R)

**LALITHA**
INTERNATIONAL PUBLIC SCHOOL
PRE UNIVERSITY COLLEGE
IIT AND NEET ACADEMY
SMART KIDS
CARE TAKING

Mob: 9980629965 / 7022004109 / 7022005826 # 67/1, Lokikere Main Road, Davanagere 577 005.



# ಜನ್ಮದಿನದ ಶುಭಾಶಯಗಳು



ನಗರಸಭೆ ಮಾಜಿ ಅಧ್ಯಕ್ಷರು, ನಗರಪಾಲಿಕೆ ಮಾಜಿ ಸದಸ್ಯರು, ಯುವಕರ ಕಣ್ಮಣಿ, ಸರಳ ಸಜ್ಜನಿಕೆಯ ಹಾಗೂ ಪ್ರಸ್ತುತ ದಿನಮಾನದ ಮಾದರಿ ಸಮಾಜ ಸೇವಕರು, ಸ್ವಾಭಿಮಾನಿ ವ್ಯಕ್ತಿತ್ವವುಳ್ಳವರಾದ

**ಶ್ರೀ ಶಿವನಳ್ಳಿ ರಮೇಶ್**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲೆಂದು ಎಂದು ಪ್ರಾರ್ಥಿಸುತ್ತಾ, ಶ್ರೀಯುತರಿಗೆ ಇನ್ನೂ ಉನ್ನತ ಸ್ಥಾನಮಾನಗಳು ಲಭಿಸಲಿ ಎಂದು ಆಶಿಸುತ್ತೇವೆ.

**ಶಿವನಳ್ಳಿ ರಮೇಶ್ ಅಭಿಮಾನಿಗಳ ಬಳಗ**



# ಸ್ವಾಗತ ಸುಸ್ವಾಗತ


ಫ್ಯಾಮಿಲಿ ಫ್ಯಾಷನ್‌ನಲ್ಲಿ ಸಂಚಲನದ ಬದಲಾವಣೆಗೆ

**ಶ್ರೀಕಾರ**

GRAND OPENING TODAY 1ST MARCH 2025

ನಮ್ಮ ದಾವಣಗೆರೆ ನಮ್ಮ ಸ್ಟೈಲ್

ಗೌರವ ಅತಿಥಿಗಳಿಗೆ



ಸನ್ಮಾನ್ಯ ಶ್ರೀ ಡಾ. ಶಾಮನೂರು ಶಿವಶಂಕರಪ್ಪ ನವರು
ಮಾಜಿ ಸಚಿವರು ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ, ದಾವಣಗೆರೆ.

ಸನ್ಮಾನ್ಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ರವರು
ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ

ಸನ್ಮಾನ್ಯ ಶ್ರೀ ಡಾ. ಪ್ರಭಾ ಮಲ್ಲಿಕಾರ್ಜುನ್ ರವರು
ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ

SRI G. M. SIDDESHWARA
Hon'ble former minister (Govt of India)

**ಈದಿನ ಅದ್ದೂರಿ ಪ್ರಾರಂಭ**

ಪ್ರಮುಖ ಸಿನಿ ತಾರೆ
**ರಚಿತಾ ರಾಮ್** ಅವರ
ಸ್ವಹಸ್ತಗಳಿಂದ
**ಅದ್ದೂರಿ ಆರಂಭ**
ಬೆಳಿಗ್ಗೆ : 10.30 ನಿ.ಕ್ಕೆ



ಕೇವಲ **99** ರೂಪಾಯಿಗಳಿಂದ ಆರಂಭದ ಬೆಲೆಗಳು

ಸಾಂಪ್ರದಾಯಿಕ ವಸ್ತ್ರಗಳ
ಅತ್ಯಾಧುನಿಕ ಫ್ಯಾಷನ್
ಮಕ್ಕಳಿಗೂ ಮತ್ತು ದೊಡ್ಡವರಿಗೂ
ಮನ ಸೆಳೆಯುವ ವಸ್ತ್ರಗಳು

ಅತ್ಯದ್ಭುತ **ಪ್ರಾರಂಭೋತ್ಸವದ ಆಫರ್‌ಗಳು**

**ದಿ ಚೆನ್ನೈ ಶಾಪಿಂಗ್ ಮಾಲ್®**

ಪಿ.ಬಿ.ರಸ್ತೆ, ಅರುಣಾ ಚಿತ್ರಮಂದಿರದ ಹತ್ತಿರ, ದಾವಣಗೆರೆ

ಸೀರೆಗಳು | ವುಮೆನ್ಸ್ ವೇರ್ | ಮೆನ್ಸ್ ವೇರ್ | ಕಿಡ್ಸ್ ವೇರ್


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas